BUS ACCIDENT AT HALIYAL

225. Sri VIRUPAKSH M. GHADI (Haliyal).—

Will the Minister for Labour be pleased to state:—

(*a*) whether the Government is aware of the Bus accident on 17th April, 1972 at Haliyal;

(*b*) if so, the number of persons that suffered injuries;

(*c*) whether any compensation was paid to injured people?

Sri AZEEZ SAIT (Minister for Labour).—

(*a*) Yes.

(*b*) 31.

(*c*) Yes. *Ex-gratia* Compensation was paid to the four of the injured as detailed in the Statement appended.

STATEMENT

		Rs.
1.	Smt. Shivalingavva, wife of S. V. Hiremath of Miliyal.	200—00
2.	Smt. Shantavva, wife of Maruti Sungar of Tergaon.	100—00
3.	Sri Yamanappa Dyamappa Gatti of Katkol ..	50—00
4.	Sri Chavadappa Huvappa Madival of Jawalli ..	50—00

INTRODUCTION OF BILLS

(i) *Mysore Homoeopathic Practitioners (Amendment) Bill,* 1972.

(ii) *Mysore Ayurvedic and Unani Practitioners Registration and Medical Practitioners' Miscellaneous Provisions (Amendment) Bill,* 1972.

(iii) *Mysore Tenants (Relief in Payment of Arrears of Rent) Bill,* 1972.

(iv) *Government Grants (Mysore Extension) Bill,* 1972.

(v) *Mysore Stamps (Amendment) Bill,* 1972.

(vi) *Mysore Court Fees and Suits Valuation (Amendment) Bill,* 1972.

(vii) *Mysore Khadi and Village Industries (Amendment) Bill,* 1972.

Sri H. SIDDAVEERAPPA (Minister for Health).—Madam, I beg to introduce:—

(i) The Mysore Homoeopathic Practitioners (Amendment) Bill, 1972;**

(ii) The Mysore Ayurvedic and Unani Practitioners Registration and Medical Practitioners' Miscellaneous Provisions (Amendment) Bill, 1972;**

Madam SPEAKER.—The Bills are introduced.

Sri N. HUTCHAMASTHY GOWDA (Minister for Revenue).—I beg to introduce:

(i) The Mysore Tenants (Relief in Payment of Arrears of Rent) Bill, 1972;**

(ii) The Government Grants (Mysore Extension) Bill, 1972;**

(iii) The Mysore Stamp (Amendment) Bill, 1972.**

Madam SPEAKER.—The Bills are introduced.

Sri D. K. NAIKAR (Minister for Law and Parliamentary Affairs).—Madam, I beg to introduce:

The Mysore Court Fees and Suits Valuation (Amendment) Bill, 1972;**

Madam SPEAKER.—The Bill is introduced.

Sri S. M. KRISHNA (Minister for Industries).—Madam, I beg to introduce:

The Mysore Khadi and Village Industries (Amendment) Bill, 1972.**

Madam SPEAKER.—The Bill is introduced.

MOTION—

RE:—*Scarcity conditions in certain areas of the State and relief measures adopted and to be adopted;*

Sri N. HUTCHAMASTHY GOWDA (Minister for Revenue).—Madam, I beg to move:

"That the scarcity conditions in certain areas of the State and relief measures adopted and to be adopted, be taken into consideration."

**All the Seven Bills, introduced in the House, are reproduced as Annexure.

Madam SPEAKER.—Motion moved :

"That the scarcity conditions in certain areas of the State and relief measures adopted and to be adopted, be taken into consideration."

†ಶ್ರೀ ಎಚ್. ಡಿ. ದೇವೇಗೌಡ.—ರೂಲ್ 146ರ ಪ್ರಕಾರ ನಾನು ಸಹ ಇದೇ ವಿಚಾರದಲ್ಲಿ ಒಂದು ಸ್ಪೆಷಲ್ ರೆಜಲ್ಯೂಷನ್ನನ್ನು ತಮಗೆ ಕಳುಹಿಸಿದ್ದೆ. ಆದರೆ ಅದನ್ನು ತಮ್ಮ ಅಫೀಸಿನವರು ನಬ್‌ಸ್ಟಿಟ್ಯೂಟ್ ಮೋಷನ್ ಆಗಿ ಪರಿವರ್ತನೆ ಮಾಡಿದ್ದಾರೆ. ಅದು ಈ ರೀತಿ ಇದೆ :—

"This Assembly is of the opinion that a Special Committee consisting of the *following Hon'ble Members of this House shall be constituted with a view to tour the famine effected areas in the Districts of Gulbarga, Bidar, Bijapur, Belgaum, Bellary and submit a report to this House for consideration within a week and in the meanwhile this House do stand adjourned till such report is made available to it : "

Sriyuths.—

*H. D. Deve Gowda
Bapu Gowda
C. M. Arumugam
V. N. Patil
D. Poosalingam
T. R. Shamanna
B. B. Sayanak
S. Y. Patil
Viswanath Reddy
Raja Pid Naik
Kagodu Thimmappa
Veerabhadrappa Patil
B. Shivanna (Minister of State for Finance)
N. Hutchamasthy Gowda (Minister for Revenue)
H. M. Channabasappa (Minister for Public Works)
Vatal Nagaraj
S. Bangarappa
C. Byre Gowda
S. M. Lingappa
D. B. Kalmankar

ಅಧ್ಯಕ್ಷರು.—ಈಗಾಗಲೇ ಒಂದು ಮೋಷನ್ ನಥಿಯ ಮುಂದೆ ಇದೆ. We have to find out some time for this motion also. Both may be combined and discussed together.

ಶ್ರೀ ಎಚ್. ಡಿ. ದೇವೇಗೌಡ.—ಈಗ ನಾನು ಈ ಒಂದು ಮೋಷನ್ನನ್ನು ಮೂವ್ ಮಾಡಿದ ಉದ್ದೇಶವೇನೆಂದರೆ, ರಾಜ್ಯದಲ್ಲಿ ಕೆಲವು ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇರುವುದರ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಮೊದಲು, ಎಲ್ಲ ರಾಜಕೀಯ ಪಕ್ಷಗಳ ಸದಸ್ಯರನ್ನು ಒಳಗೊಂಡಂತೆ ಇರುವ ಒಂದು ಸಮಿತಿಯನ್ನು ತಾವು ನೇಮಕ ಮಾಡಿ, ಆ ಸಮಿತಿಯವರು ಆ ಭಾಗಗಳಿಗೆ ಹೋಗಿ ವಿಷಯಗಳನ್ನು ಸಂಗ್ರಹಣೆ ಮಾಡಿ ಅಲ್ಲಿ ಏನು ಪರಿಸ್ಥಿತಿ ಇದೆ ಎಂಬ ಬಗ್ಗೆ ಒಂದು ವರದಿ ಕೊಟ್ಟ ಮೇಲೆ ಡಿಸ್‌ಕಷನ್‌ಗೆ ತೆಗೆದುಕೊಳ್ಳುವುದು ಒಳ್ಳೆಯದೆಂದು ನಮ್ಮಗಳ ಅಭಿಪ್ರಾಯವಾಗಿದೆ.

ಇದರ ಹಿನ್ನೆಲೆಯಾದರೂ ಇಷ್ಟೆ, ಇವೊತ್ತು ಸರ್ಕಾರದವರು ಕೊಡುತ್ತಿರುವ ಅಂಕಿಅಂಶಗಳಿಗೂ ಪತ್ರಿಕೆಗಳಲ್ಲಿ ಬಂದಿರುವ ವರದಿಗಳಿಗೂ ವ್ಯತ್ಯಾಸವಿದೆ. ಅಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಕೆಲಸಗಳ ಬಗ್ಗೆ ಮಂತ್ರಿಗಳು ಕೊಡುತ್ತಿರುವ ಹೇಳಿಕೆಗಳು ಸತ್ಯಕ್ಕೆ ದೂರವಾಗಿರಬಹುದು ಎಂಬ ಸಂಶಯ ನಮಗೆ ಬಂದಿದೆ. ಏಕೆಂದರೆ ನೆನ್ನೆ ತಾನೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ತಮ್ಮ ಸಚಿವರೊಬ್ಬರು ಕೊಟ್ಟ ಹೇಳಿಕೆಯನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಹುಕುಂ ಮಾಡು ವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು. ಕಳೆದ ಸಾರಿ ಈ ಸಭೆಯನ್ನು ಮುಂದೂಡಿದ ಮೇಲೆ ಇಲ್ಲಿಯವರೆಗೆ ಇದೇ ವಿಚಾರದಲ್ಲಿ ಅನೇಕ ಹೇಳಿಕೆಗಳು ಮತ್ತು ಪ್ರತಿ ಹೇಳಿಕೆಗಳು ಬಂದಿವೆ. ಮಂತ್ರಿಗಳಿಂದ ಬಂದಿರುವ ಅನೇಕ ಹೇಳಿಕೆಗಳನ್ನು ನಾವು ನೋಡಿದ್ದೇವೆ. ಮುಖ್ಯವಾಗಿ ಕಾಂಗ್ರೆಸ್ (ಆರ್) ನವರು ಮತ್ತು ಕಾಂಗ್ರೆಸ್ (ಒ) ನವರು ಗುದ್ದಾಟ ಮಾಡುವ ಪ್ರಶ್ನೆ ಇದಲ್ಲ. ಈಗಾಗಲೇ ಎಸ್.ಎಸ್.ಪಿ. ಪಾರ್ಟಿಯವರು ಆ ಭಾಗಗಳಲ್ಲಿ ಸುಧೀರ್ಘವಾಗಿ ಪ್ರವಾಸ ಮಾಡಿ ಎಲ್ಲ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿ ಅದರ ಬಗ್ಗೆ ಮುಖ್ಯಮಂತ್ರಿಗಳಿಗೆ ವಿವರಣೆ ಕೊಟ್ಟಿರ ಬಹುದು. ಮುಖ್ಯವಾಗಿ ಅಲ್ಲಿ ಏನೇನು ಕೆಲಸಗಳಾಗುತ್ತಿವೆ ಎಂಬ ಬಗ್ಗೆ ವಿಷಯಗಳನ್ನು ಸಂಗ್ರಹಣೆ ಮಾಡಬೇಕಾಗಿದೆ. ಸರ್ಕಾರದ ಪರವಾಗಿ ಅಲ್ಲಿ ಏನೇನು ಕೆಲಸಗಳಾಗುತ್ತಿವೆ ಎಂಬ ಬಗ್ಗೆ ಮಂತ್ರಿಗಳು ಕೊಡುವ ಹೇಳಿಕೆಯಲ್ಲಿ ನಮಗೆ ವಿಶ್ವಾಸವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಒಬ್ಬೊಬ್ಬರು ಮಂತ್ರಿಗಳು ಒಂದೊಂದು ರೀತಿಯ ಹೇಳಿಕೆ ಕೊಟ್ಟಿರುವುದರಿಂದ, ನಮಗೆ ಕರಾರುವಾಕ್ಕಾದ ಅಂಕಿ ಅಂಶಗಳು ಬೇಕಾಗಿದೆ. ಅದಕ್ಕಾಗಿ ತಾವು ಒಂದು ಸಮಿತಿಯನ್ನು ನಾನು ಹೇಳಿದಂತೆ ನೇಮಕ ಮಾಡಬೇಕು. ಇಂತಹ ಸಂದರ್ಭಗಳಲ್ಲಿ ಪರ್ಲಮೆಂಟ್‌ನಲ್ಲಿಯೂ ಸಹ ಸ್ಟಡೀಟೀವ್ ಎಂಬುದಾಗಿ ಮಾಡಿ, ಅವರಿಂದ ವರದಿಗಳನ್ನು ತರಿಸಿಕೊಂಡು ನಿರ್ಣಯ ಮಾಡಿರುವ ಅನೇಕ ನಿದರ್ಶನಗಳಿವೆ. ಆದಕಾರಣ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಏನೆಂದರೆ, ತಾವು ಈ ಸಭೆಯ ಎಲ್ಲ ರಾಜಕೀಯ ಪಕ್ಷಗಳ ಸದಸ್ಯರುಗಳಿಂದ ಒಳಗೊಡಿದ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಆ ಸಮಿತಿಯವರು ಅಲ್ಲಿಗೆ ಹೋಗಿ ಅಧ್ಯಯನ ಮಾಡಿ ಅಲ್ಲಿರತಕ್ಕಂಥ ಪರಿಸ್ಥಿತಿ ಯನ್ನು ಈ ಮನೆಗೆ ತಿಳಿಸಿದ ಮೇಲೆ ಚರ್ಚೆ ಮಾಡೋಣ.

ಅಧ್ಯಕ್ಷರು.— ಈಗ ಮಾನ್ಯ ಮಂತ್ರಿಗಳು ಮಾತನಾಡಲಿ. ಅವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆಂಬುದನ್ನು ನೋಡೋಣ.

†Sri C. M. ARUMUGAM (K.G.F.).—Madam, This is only a Motion urging the adjournment of the House. We want to adjourn the House so that the Committee constituted may visit the drought-affected or famine affected area and submit its report to this House. After the receipt of the Committee's report we may take up discussion of the Motion. That is what we want. Instead if, at the moment, you permit the motion and allow a discussion on it, the effect of this substitute motion is diluted and it will have no effect. Sri Hutchamasthy Gowda, Minister for Revenue, is going to make a written statement. He is going to say what has been done and how much money has been spent. There is controversy over the fact whether the Government has really spent the money or not. In fact, this morning, I received a telegram from Gulbarga District that there are five deaths in Malki Village, Sedam Taluk, on account of famine. Every day it is happening. I am not exaggerating the picture. So to give a correct picture to this house and in order to have a thorough discussion on the scarcity conditions in certain areas of the State, we must have relevant facts before the House. Sri Hutchamasthy Gowda is only placing an official report regarding the facts.

I can submit one thing, Madam Speaker, in every village, the village patel is in charge of the registration of births and deaths. We

(SRI C. M. ARUMUGAM)

can find out from those registers how many deaths took place during this period. We can understand that every dispensary and hospital may maintain some record in this respect. I can tell you that Mr. Hutchamasti Gowda is not having this information with him about the deaths that have occurred during the last three or four months; and whether it is due to starvation or insufficiency of food. I am not discussing the merits or demerits of famine conditions, how relief work has been carried out, has it been done with political motives or with a view to strengthen the party in power—I am not discussing that. I am only saying that this information about the deaths that took place in that area is an information which will not contain in the statement of Sri Hutchamasthi Gowda.

You may ask, what about your attitude towards this motion? We are not going to permit the discussion unless a committee is constituted and the Assembly is adjourned and yourself and the Leader of the Opposition sit together and take a decision. We would adjust and we are not going to be rigid. This Government is a collective Government, fully responsible to the House. One Minister issued a statement about the fee question without the permission of the Cabinet and he has been permitted to continue as a member of the Cabinet. Well it is a matter left to the Chief Minister. Madam Speaker, yesterday before you gave a ruling on the motion that we tabled, it was but right that the concerned Minister should have been permitted to make a statement. In order to have a correct picture, it is necessary we should visit the area. Here is Veerendra Patil's place CHINCHOLI which has been made into a paradise on earth in the matter of roads, wells, etc.

Sri H. SIDDAVEERAPPA.—What is the relevancy?

Sri C. M. ARUMUGAM.—'Relevancy'—you should leave it to the Speaker.

Sri H. SIDDAVEERAPPA.—I rise to a point of order Sir,

Sri C. M. ARUMUGAM.—I have been permitted by the Speaker to speak. He cannot question the relevancy. Therefore, Madam Speaker, I say that there is a dispute on facts as to what is prevailing in Gulbarga.

Sri H. SIDDAVEERAPPA.—I rise to a point of order.

Sri C. M. ARUMUGAM.—You may quote the rule—which rule is violated.

Sri H. SIDDAVEERAPPA.—My fried prefaced saying that he is confining only within the frame work of rules. The motion given notice of by Mr. Deve Gowda is under the Rules of Procedure. This is followed. What has Shivanna's affair to do with this? What is the relevancy? Can a Member go on speaking on everything under the Sun?

Sri N. HUTCHAMASTHY GOWDA.—I rise on a point of order.

Sri C. M. ARUMUGAM.—Before the Speaker can give a ruling on the point of order raised by Sri Siddaveerappa, he cannot raise a point of order.

Madam SPEAKER.—And the Hon'ble Member also should not have spoken now. Let us hear the Chief Minister.

†ಶ್ರೀ ಡಿ. ದೇವರಾಜ ಅರ್ಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಪ್ರಶ್ನೆ ಏನು? ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರವರು ಒಂದು ಮೋಷನ್‌ನನ್ನು ಇಲ್ಲಿ ತಂದಿದ್ದಾರೆ. ಸರಕಾರದ ಪಾಲಿಸಿ ಸ್ಟೇಟುಮೆಂಟು ಏನಿದೆಯೋ ಅದರ ಬಗ್ಗೆ ನಮ್ಮ ರವೆನ್ಯೂ ಮಂತ್ರಿಗಳು ಇಲ್ಲಿ ಒಂದು ಸ್ಟೇಟಮೆಂಟು ಮಾಡಬೇಕೆಂದು ಹೇಳಿದರು ಮತ್ತು ಅದರ ಮೇಲೆ ಇಲ್ಲಿ ಒಂದು ಮೋಷನ್ ತರಲಾಗಿದೆ ಎಂದು ಇಲ್ಲಿ ತಂದಿದ್ದಾರೆ. ಈಗ ತಾವು ಈ ಮೋಷನ್‌ನನ್ನು ಸಬ್‌ಸ್ಟಿಟ್ಯೂಟ್ ಮೋಷನ್ ಎಂದು ಇಲ್ಲಿ ಇಟ್ಟಿರತಕ್ಕದ್ದು ಎಂದು ಹೇಳಿದ್ದೀರಿ. ಆ ಮೋಷನ್ ಹೀಗೆ ಇದೆ:—

> "This Assembly is of the Opinion that a Special Committee consisting of the following Hon'ble Members of this House shall be constituted.....etc. etc.
>
> .....report is made available to it."

ಹೀಗೆ ಹೇಳುತ್ತಾ ಇದರಲ್ಲಿ ಎಲ್ಲ ವಿವರಗಳನ್ನೂ ಕೊಟ್ಟು ಇದು ಸಬ್‌ಸ್ಟಿಟ್ಯೂಟು ಮೋಷನ್ ಎಂದು ಇಲ್ಲಿರತಕ್ಕದ್ದು ಇದು ರೂಲು 279ರ ಪ್ರಕಾರ ಬರುತ್ತದೆ ಎಂದು ಹೇಳಿದ್ದೀರಿ. ಆದರ ಮಾನ್ಯ ಶ್ರೀ ದೇವೇಗೌಡರು ಮಾತನಾಡುತ್ತ ಅವರು ರೂಲು 146ರ ಪ್ರಕಾರ ಮೋಷನ್ ಕಳುಹಿಸಿದ್ದೆ ಎಂದು ಹೇಳಿದರು. ಅದನ್ನು ಆಫೀಸಿನವರು ಬದಲು ಮಾಡಿ ರೂಲು 279ರ ಪ್ರಕಾರ ಇದನ್ನು ತರಲಾಗಿದೆ ಎಂದು ಇದನ್ನು ಸಬ್‌ಸ್ಟಿಟ್ಯೂಟು ಮೋಷನ್ ಎಂದು ಹೇಳುತ್ತಿದ್ದಾರೆ. ಈಗ ನಮ್ಮ ಮುಂದೆ ರೂಲು 146ರ ಪ್ರಕಾರ ಬಂದಿದೆಯೋ, ಇಲ್ಲವೊ 279ರ ಪ್ರಕಾರ ಇದನ್ನು ತಂದಿದ್ದಾರೋ ಎಂಬುದನ್ನು ಮಾನ್ಯ ಅಧ್ಯಕ್ಷರು ಹೇಳಬೇಕು. ನಮಗೆ ಇದರ ಬಗ್ಗೆ ಹೇಳಲು ಏನೂ ಗೊತ್ತಾಗುವುದಿಲ್ಲ. ಶ್ರೀಮಾನ್ ಅರ್ಮುಗಂರವರು ಇಲ್ಲಿ ಮಾತನಾಡುತ್ತಾ ಇದನ್ನು ಅಡ್‌ಜರ್ನ್‌ಮೆಂಟು ಮೋಷನ್ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ಮುಂದೆ ಯಾವ ಅಡ್‌ಜರ್ನ್‌ಮೆಂಟು ಮೋಷನ್ ಕೂಡ ಬಂದಿಲ್ಲ. ಇನ್ನೊಬ್ಬರು ಇದು ಬೇರೆ ತರಹದ ಮೋಷನ್ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿಯೋ ಗೊತ್ತಿಲ್ಲ. ಇಲ್ಲಿ ರೂಲ್ಸ್ 146ರ ಪ್ರಕಾರ ಮೋಷನ್ ಬಂದಿಲ್ಲ, ರೂಲು 279ಪ್ರಕಾರ ಸಬ್‌ಸ್ಟಿಟ್ಯೂಟ್ ಮೋಷನ್ ತರಲಾಗಿದೆ ಎಂದು ಹೇಳುತ್ತಿದ್ದಾರೆ.

Madam SPEAKER.—I have already said this is a substitute motion.

Sri D. DEVARAJ URS.—Now I get a ruling from the Chair that this is a substitute motion, under rule 279, let us confine ourselves to that. Even if it is a substitute motion under 279, there is a procedure for that. I know that Mr. Arumugam is one of our veteran Members of the Assembly. Only yesterday he was so vehement in asserting that he would not go beyond the four corners of the rules and regulations. I am sure, as the Hon'ble Member of this House, he respects the very statement he makes and all of us are bound by rules of procedure of the House.

Sri C. M. ARUMUGAM.—I agree Sir.

Sri D. DEVARAJ URS.—Rule 279 reads thus :

"279 : A motion that the policy or situation or statement or any other matter be taken into consideration shall not be put to the vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly shall be taken on such motion."

As I understand Madam Speaker, you have given permission. So it is admitted by the Speaker and because you have admitted under rule 279 it is a part of this main motion. The Hon'ble Minister has moved a motion and the Hon'ble Leader of the Opposition has brought a substitute motion.

As I understand, the statement of the Minister as well as the motion of the Opposition Leader could be discussed together. So far as the Opposition Leader's motion is concerned, the rule enjoins that after the conclusion of the debate it should be voted upon. Whether we should vote or not is another matter. If the House wants to vote, nobody can prevent it. I again very respectfully appeal through you Madam, to my Hon'ble Friend Sri Arumugam to honour and respect the Rules of Procedure. Now, I am not against the motion because it is already admitted by the Chair under Rule 279. So, let us discuss. As to what should be done with regard to the substitute motion, whether it should be voted upon or not—that is a matter which the House can consider or we can sit and discuss and come to some understanding. I think this would be the proper course to adopt. So, in all humility I submit that it may not be appropriate to say that we should not discuss anything else until what is stated in the substitute motion is done.

ಶ್ರೀ ಎಚ್. ಡಿ ದೇವೇಗೌಡ.—ನಾವು ನಿನ್ನೆಯ ದಿನ ರೂಲ್ 146 ಕೆಳಗೆ ಒಂದು ಮೋಷನ್ ಕಳುಹಿಸಿಕೊಟ್ಟಿದ್ದೇವೆ. ಅದನ್ನು ರೂಲ್ 279ರ ಕೆಳಗೆ ಸಬ್ಸ್ಟಿಟ್ಯೂಟ್ ಮೋಷನ್ ಆಗಿ ಪರಿವರ್ತನೆ ಮಾಡಲಾಗಿದೆ ಎಂದು ಆದೇಶವನ್ನು ಕೊಟ್ಟಿದ್ದೀರಿ. ನಾವು ಮೋಷನ್ ಕಳುಹಿಸಿದಾಗ 146 ರೂಲ್ ಕೆಳಗೆ ಕಳುಹಿಸಿದ್ದೇವೆ. ಅದಕ್ಕೆ ಹಿನ್ನಲೆಯಾದರೂ ಇಷ್ಟೆ. ಈ ಸಭೆಯಲ್ಲಿ ಸರ್ಕಾರದ ಪತಿಯಿಂದ ಇದಕ್ಕಿಂತ ಮೋಷನ್ ಏನಿದೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದೇ ಆಗಿದೆ. ತಮ್ಮ ಆಫೀಸಿನಿಂದ ಬಂದಿರುವ ಸರ್ಕ್ಯುಲರ್‌ನಲ್ಲಿ ಈ ಮೋಷನ್ ರೂಲ್ 279ರ ಕೆಳಗೆ ಬರುತ್ತದೆ ಎಂದು ಉಲ್ಲೇಖ ಮಾಡಿಲ್ಲ. ಅದನ್ನು ಈಗ ತಿಳಿಸುತ್ತಿದ್ದೀರಿ. ಅದರ ಬಗ್ಗೆ ಪ್ರಶ್ನೆಮಾಡುವುದಕ್ಕೆ ನಾನು ಹೋಗುವುದಿಲ್ಲ. ಸಭಾ ನಾಯಕರು ಹೇಳಿದುದನ್ನೂ ಕೇಳಿದೆ. ರೂಲ್ 279ರ ಕೆಳಗೆ ಈ ಮೋಷನ್ ಬರುತ್ತದೆ ಎಂದು ಸಭಾಧ್ಯಕ್ಷರು ತಿಳಿಸಿದ ಮೇಲೆ ನಾವು ಕಾನೂನು ನಿಯಮಾವಳಿಯ ಒಳಗೆ ಕೆಲಸ ಮಾಡಬೇಕೆಂದು ಅವರು ಹೇಳಿದರು. ಅದನ್ನು ನಾನೂ ಒಪ್ಪುತ್ತೇನೆ. ಆದರೆ ಈ ಮೋಷನ್ ಸಭೆಯ ಮುಂದೆ ತರಬೇಕು ಎಂದು ಅಧ್ಯಕ್ಷರ ಅಪ್ಪಣೆ ಕೋರಿದಾಗ ರೂಲ್ 146ರ ಕೆಳಗಡೆ ತರಬೇಕು ಎನ್ನುವುದನ್ನು ಸ್ಪಷ್ಟವಾಗಿ ಹೇಳಿ ಇತ್ತ ಕಡೆಯ ಸದಸ್ಯರು ರುಜು ಹಾಕಿದರು. ಅದರ ಉದ್ದೇಶವಾದರೂ ಇಷ್ಟೆ. ಈ ಹೊತ್ತು ರೆವಿನ್ಯೂ ಮಂತ್ರಿಗಳು ಮಾಡತಕ್ಕ ಸೇಳಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿಲ್ಲ, ತಯಾರಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಹತ್ತು ಸಲ ಹೇಳುವುದರಿಂದ ಆದಕ್ಕೆ ಶಕ್ತಿ ಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ,—ನಿಮ್ಮ ಪತ್ರಿರ 165 ಜನರ ಸಂಖ್ಯಾಬಲವಿದೆ ಎಂದರೂ ಬಲ ಬರುವುದಿಲ್ಲ. ನನ್ನನ್ನು ಹೆದರಿಸಬೇಕಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಿದ್ಧರಿಲ್ಲ, ಸಿದ್ಧರಿಲ್ಲ ಎಂದ ಮಾತ್ರಕ್ಕೆ ಶಕ್ತಿ ಹೆಚ್ಚಾಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಒಂದು ಸಾರಿಯಲ್ಲ, ಹತ್ತು ಸಾರಿ ಹೇಳುತ್ತೇನೆ. ದಯಮಾಡಿ ಇದರ ಬಗ್ಗೆ ಮಾನ್ಯ ಅಧ್ಯಕ್ಷರು ನಿರ್ಣಯ ಮಾಡಬೇಕು. ಏಕೆಂದರೆ ನಾನು ಯಾವ ಯಾವ ಮಂತ್ರಿಗಳು ಏನೇನು ಹೇಳಿಕೆಗಳನ್ನು ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ಕೊಡಲಿಕ್ಕೆ, ಚರ್ಚೆ ಮಾಡುವುದಕ್ಕೆ ಈಗ ಹೋಗುವುದಿಲ್ಲ. ಮಾನ್ಯ ಮಿತ್ರರಾದ ಅಮರ್ಜಿಗಂ ಅವರು ಮಾನ್ಯ ಶಿವಣ್ಣನವರ ವಿಷಯವನ್ನು ಪ್ರಸ್ತಾಪ ಮಾಡಿದರು. ಪೇರಿಟ್ಸ್ ಆಥವಾ ಡೀಮೆರಿಟ್ಸ್ ಮೇಲೆ ಮಾತನಾಡಲು ನಾನು ಹೋಗುವುದಿಲ್ಲ. ಇದಕ್ಕೆ ರಾಜಕೀಯ ಬಣ್ಣವನ್ನು ಹಚ್ಚಬಾರದೆಂದು ನೀವು ಹೇಳಿದ್ದೀರಿ, ಕಳಕಳಿಯ ಪ್ರಾರ್ಥನೆ ಮಾಡಿದ್ದೀರಿ. ಅದನ್ನು ನಾನೂ ಒಪ್ಪುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರಿಗೂ ಶ್ರೀಮಾನ್ ಹೆಗಡೆ ಅವರಿಗೂ ಅಭಾವ ಪೀಡಿತ ಪ್ರದೇಶಗಳಲ್ಲಿ ಹೋಗಿ ನೋಡಿಕೊಂಡು ಬರುವ ವಿಷಯದಲ್ಲಿ ನಡೆದಿದೆ ಎನ್ನಲಾದ ಪತ್ರವ್ಯವಹಾರದ ವಿವರಗಳನ್ನು ನಾವೆಲ್ಲ ಪತ್ರಿಕೆಗಳಲ್ಲಿ ನೋಡಿದ್ದೇವೆ. ಇದು ಶ್ರೀಮಾನ್ ಚನ್ನಬಸಪ್ಪನವರ ಮತ್ತು ಶ್ರೀಮಾನ್ ಹೆಗಡೆ ಅವರ ಸ್ವಂತ ವ್ಯವಹಾರವಲ್ಲ. ಇದನ್ನು ಪಕ್ಷಾತೀತವಾಗಿ ನೋಡಬೇಕು. ಆದ್ದರಿಂದ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ಹೋಗಿ, ಪರಿಸ್ಥಿತಿಯನ್ನು ಅರಿತು ಅದರ ಬಗ್ಗೆ ಒಂದು ವರದಿಯನ್ನು ಸಭೆಯ ಮುಂದೆ ಬರಬೇಕಿದೆ. ಅಲ್ಲಿಯವರೆಗೂ ಈ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ.

†ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದುದನ್ನು ನಾನು ಕೇಳಿದೆ. ಆದರೆ ಈಗ ಪ್ರಶ್ನೆ ಏನು ಬಂದಿದೆ ಎಂದರೆ ನಮಗೆ ಕೊಟ್ಟಿರುವ ನೋಟೀಸಿನಲ್ಲಿ ಸಬ್ಸ್ಟಟ್ಯೂಟ್ ಮೋಷನ್ ಎಂದು ಹಾಕಲಾಗಿದೆ. ಸಬ್ಸ್ಟಟ್ಯೂಟ್ ಮೋಷನ್ ಎಂದರೆ ಅದರ ವ್ಯಾಪ್ತಿ ಏನು ಎನ್ನುವುದನ್ನೆಲ್ಲ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಇಂಥ ಮೋಷನ್ ಮೇಲೆ ಚರ್ಚೆ ಮಾಡಬಹುದು ಅದನ್ನು ಮತಕ್ಕೆ ಹಾಕುವ ಹಾಗಿಲ್ಲವೆಂದು ಹೇಳುತ್ತ, ಆದರೆ ಅಧ್ಯಕ್ಷರ ಅನುಮತಿಯಿಂದ ಒಂದು ಸಬ್‌ಸ್ಟಾಂಟಿವ್ ಮೋಷನ್ ಸೂಕ್ತ ಕಾಲದಲ್ಲಿ ತಂದ ಪಕ್ಷದಲ್ಲಿ ಅದನ್ನು ಮತಕ್ಕೆ ಹಾಕಬಹುದು ಎಂದು ಹೇಳಿದ್ದಾರೆ. ಒಬ್ಬ ಸದಸ್ಯರಿಗೆ ಒಂದು ಮೋಷನ್ ಕೊಡುವುದಕ್ಕೆ ಅಧಿಕಾರವಿದೆ. ಒಬ್ಬರಿಗಿಂತ ಹೆಚ್ಚು ಸದಸ್ಯರಿಗೆ ಮೋಷನ್ ಕೊಡುವುದಕ್ಕೆ ಅಧಿಕಾರವಿದೆ. ಆ ರೀತಿ ಕೊಟ್ಟ ಸೂಚನೆಯನ್ನು ತಿದ್ದುಪಡಿ ಮಾಡುವುದಕ್ಕೆ ತಮಗೆ ಅಧಿಕಾರವಿದೆಯೇ ಡಿಸ್ ಅಲೋ ಮಾಡುವುದಕ್ಕೆ ಅಧಿಕಾರವಿದೆಯೇ, ಇಲ್ಲವೇ ಎನ್ನುವುದನ್ನೆಲ್ಲ ನಾವು ಈಗ ವಿಮರ್ಶೆ ಮಾಡಬೇಕಾಗಿದೆ. ಇದನ್ನೆಲ್ಲ ನೋಡಿದರೆ ನನಗನ್ನಿಸುತ್ತದೆ, ಮಾನ್ಯ ಮುಖ್ಯ ಮಂತ್ರಿಗಳ ವಾದದಲ್ಲಿ ತಿರುಳಿಲ್ಲ. ಏಕೆಂದರೆ ರೂಲ್ 271 ಏನು ಹೇಳುತ್ತದೆ ಎಂದರೆ :

> "271. A motion must not raise a qusetion substantially identical with one on which the Assembly has given a decision in the same session."

ಮಾನ್ಯ ದೇವೇಗೌಡರು ಕಳುಹಿಸಿರುವುದು ಆ ತರಹ ಮೋಷನ್ ಅಲ್ಲ. ಎರಡನೆಯದು

Rule 272(1) says :

> "The Speaker may amend or disallow a motion which in his opinion does not comply with the rules."

So, the only thing that the Speaker can do is that she can either amend or disallow it ; she cannot convert it into a substitute motion. Rule 279 says :

> '..... unless a member moves a substantive motion in appropriate terms to be approved by the Speaker and the vote of the Assembly shall be taken on such motion."

(ಶ್ರೀ ಎಂ. ಎಸ್. ಕೃಷ್ಣನ್)

So, under Rule 279 a member has the right to move a substantive motion and the Speaker has no right to disallow or amend it. If it is amended by the Speaker, with due respect to the Chair I must say that it cannot be considered as a substitute motion at all. It has to be considered as another motion moved by an Hon'ble Member by himself or along with other members. So, now there are two motions before the House. I cannot understand how the Speaker can say that she has made it into a substitute motion because Rule 279 does not grant that power to the Speaker whereas it grants the power to a member to move such a motion. Even if the Speaker considers it as a substitute motion, the purpose with which we have brought this motion is totally different as has been clearly expressed by the Leader of the Opposition Sri Deve Gowda. There has been controversy both from this side and the other side as to whether there was any death; if so, whether due to starvation or not; whether any body died at all, etc. The second controversy was, what is the extent of relief given; was any relief given at all; whether it is sufficient or not. Therefore, I as a Member of this House, would like to know the real position on the basis of a visit to that place by a Committee authorised by this House and come before the House probably with an unanimous opinion. The under standing amongst the opposition is that it must be done in an unanimous manner. That is why names of members like Sri Shivanna, Sri Channabasappa and others from that side also have been included. We want to see as far as possible not only ministers but others also go there and study the situation and come forward here to give concrete suggestions. It is with that idea we have suggested the motion. The very purpose would be defeated if you were to allow Sri Hutchamasthi Gowda to make a statement and do not allow us to move this motion.

2-30 P.M.

Sri D. DEVARAJ URS.—I submit it is not relevant.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಚಾರದಲ್ಲಿ ಇಬ್ಬರಿಗೂ ಭಿನ್ನಾಭಿಪ್ರಾಯಗಳು ಇರ ಕೂಡದು ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳುತ್ತೇನೆ. ತಾವೂ ಕೂಡ ಪತ್ರಿಕೆಯಲ್ಲಿ ಓದಿದ್ದೀರಿ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನನ್ನ ಜೊತೆಯಲ್ಲಿ ಬರಲು ಅವರನ್ನು ಹ್ಯೂನ್ ನಲ್ಲಿ ಕರೆದುಕೊಂಡು ಹೋಗಿ ಆಲ್ಲಯ ಪರಿಸ್ಥಿತಿಯನ್ನು ತೋರಿಸುತ್ತೇನೆಂದು ಶ್ರೀಮಾನ್ ಚೆನ್ನಬಸಪ್ಪನವರು ಒಂದು ಹೇಳಿಕೆಯನ್ನು ಪತ್ರಿಕೆಯಲ್ಲಿ ಕೊಟ್ಟರು. ಅದಕ್ಕೆ ಪ್ರತಿಯಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯರೂ ಕೂಡ ಒಂದು ಹೇಳಿಕೆ ಕೊಟ್ಟರು. ಕೊನೆಗೆ ಅದು ಆಗಲಿಲ್ಲ. ಎಲ್ಲರನ್ನೂ ಕರೆದುಕೊಂಡು ಹೋಗಿ ತೋರಿಸಬೇಕು ಎನ್ನುವ ಮನೋಭಾವ ತಮಗೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನನ್ನ ಕಾಂಕ್ರೀಟ್ ಸಜೆಷನ್ ಏನೆಂದರೆ ನಮ್ಮ ಲೀಡರ್ ಆದ ಮಾನ್ಯ ಶ್ರೀ ದೇವೇಗೌಡರು ಮತ್ತು ಇನ್ನು ಇತರರು ಸೇರಿ ಈ ಒಂದು ವಿಷಯವನ್ನು ಚರ್ಚೆ ಮಾಡಿದ್ದೇವೆ. * * * *

****Not recorded.

MADAM SPEAKER.—Please do not record.

ಶ್ರೀ ಡಿ. ದೇವರಾಜ ಅರಸ್.—ಅದೇನು ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರು ಹೇಳುವುದಕ್ಕೆ ಅವಕಾಶ ಕೊಡುತ್ತಾ ಇಲ್ಲವಲ್ಲಾ!

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಆ ವಿಷಯ ನಾನು ಹೇಳಿದ ಮೇಲೆ ಹೇಳಿ. ನೀವು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಶ್ರೀಮಾನ್ ದೇವೇಗೌಡರು ಹೇಳಿದ ವಿಷಯವನ್ನೂ ಕೂಡ ಕೇಳಿದ್ದೇನೆ ರೂಲ್ 146ರ ಪ್ರಕಾರ ಮೊದಲು ಒಂದು ಮೋಷನ್‌ನ್ನು ಈಗಾಗಲೇ ತೆಗೆದುಕೊಂಡಿದ್ದೇನೆ. ತಾವು ಕೊಟ್ಟಿದ್ದ ಒಂದು ಮೋಷನ್‌ನನ್ನು ನಾನು ಆಲೋ ಮಾಡಬೇಕಾಗಿರಲಿಲ್ಲ. ಆದರೂ ಅದನ್ನು ಸಬ್ಸ್ಟಿಟ್ಯೂಟ್ ಮೋಷನ್ ಆಗಿ ತೆಗೆದುಕೊಳ್ಳಲು ಅನುಮತಿ ಕೊಟ್ಟಿದ್ದೇನೆ. You read item (vii) of Rule 148. ಎರಡೂ ಮೋಷನ್‌ಗಳ ಮೇಲೆ ಚರ್ಚೆ ಒಟ್ಟಿಗೆ ನಡೆಯುವುದು.

Sri C. M. ARUMUGAM.—The text of the motion is that the committee shall visit and give a report within a week and in the meantime this house do stand adjourned. This has been permitted and therefore the Hon'ble Member has moved the motion.

Madam SPEAKER.—There was a motion already before the House. Just because I wanted to give some concession I am allowing it as a substituted motion.

Sri C. M. ARUMUGAM.—How can you call this a substituted motion or a motion under rule 146? It says that this House do stand adjourned.

Sri D. DEVARAJ URS.—Under what rule?

Sri C. M. ARUMUGAM.—The Hon'ble Leader of the Opposition wants adjournment of the House till the Committee visits those places and comes back. He thought it fit to bring it under rule 146. The Speaker has ruled that it cannot be brought under that rule but to facilitate debate she has brought it under rule 270. We are anxious to hear from the Chair what it has to say about the content of the motion—that this House do stand adjourned. The motion says that this House do appoint a Committee. We have given some names. Let the Committee visit Gulbarga, Bijapur, Bidar, Belgaum and Raichur districts. Therefore, my submission is, before you take up the motion of Sri Huchmasthi Gowda, please permit us to discuss the motion of Sri H. D. Deve Gowda. For deciding that, I have one suggestion to make and that is to adjourn the House for half hour.

Madam SPEAKER.—Let the discussion start. Now Sri Deve Gowda may move his substitute motion.

(ii) SUBSTITUTE MOTION

re : Constitution of a Special Committee to tour the famine effected areas.

Sri H. D. DEVE GOWDA :—

"This Assembly is of the opinion that a Special Committee consisting of the following Hon'ble Members of this House shall be constituted with a view to tour the famine effected areas in the Districts of Gulbarga, Bidar, Bijapur, Belgaum, Bellary and submit a report to this House for consideration within a week and in the meanwhile this House do stand adjourned till such report is made available to it : "

Sriyuths—

1. H. D. Deve Gowda.
2. Bapu Gowda.
3. C. M. Arumugam.
4. V. N. Patil.
5. D. Poosalingam.
6. T. R. Shamanna.
7. B. B. Sayanak.
8. S. Y. Patil.
9. Viswanath Reddy.
10. Raja Pid Naik.
11. Kagodu Thimmappa.
12. Veerabhadrappa Patil.
13. B. Shivanna (Minister of State for Finance).
14. N. Hutchamasthy Gowda (Minister for Revenue).
15. H. M. Channabasappa (Minister for Public Works).
16. Vatal Nagaraj.
17. S. Bangarappa.
18. C. Byre Gowda.
19. S. M. Lingappa.
20. D. B. Kalmankar.

MADAM SPEAKER.—Motion moved.

"This Assembly is of the opinion that a Special Committee consisting of the following Hon'ble Members of this House shall be constituted with a view to tour the famine

effected areas in the Districts of Gulbarga, Bidar, Bijapur, Belgaum, Bellary and submit a report to this House for consideration within a week and in the meanwhile this House do stand adjourned till such report is made available to it: "

Sriyuths—

1. H. D. Deve Gowda.
2. Bapu Gowdwa.
3. C. M. Arumugam.
4. V. N. Patil.
5. D. Poosalingam.
6. T. R. Shamanna.
7. B. B. Sayanak.
8. S. Y. Patil.
9. Viswanath Reddy.
10. Raja Pid Naik.
11. Kagodu Thimmappa.
12. Veerabhadrappa Patil.
13. B. Shivanna (Minister of State for Finance).
14. N. Hutchamasthy Gowda (Minister for Revenue).
15. H. M. Channabasappa (Minister for Public Works).
16. Vatal Nagaraj.
17. S. Bangarappa.
18. C. Byre Gowda.
19. S. M. Lingappa.
20. D. B. Kalmankar.

Sri C. M. ARUMUGAM.—We are not in a mood to discuss. the scarcity condition unless this is agreed to.

Sri H. M. CHANNABASAPPA.—On a point of order, Sir.

ಶ್ರೀ ವಾಟಾಳ್ ನಾಗರಾಜ್. — ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಗೊತ್ತಿದೆ ತಾವು ಜನತಾ ಮಂತ್ರಿಗಳು ನಮ್ಮ ಬಗ್ಗೆ ಮರ್ಯಾದೆ ಕೊಡದೆ ಇದ್ದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಕಾರಣದಿಂದ ಗೊತ್ತುವಳಿಯನ್ನು ತಂದಿದ್ದೀವೆ ಅದನ್ನು ಬಿಟ್ಟು ಬೇರೆ ಚರ್ಚೆಗೆ ಹೋಗುತ್ತಿದ್ದೀವೆ. ನಾವು ಗೊತ್ತುವಳಿಯನ್ನು ಮಂಡಿಸಿರುವ ಉದ್ದೇಶ ಬೇರೆ. ವಿಧಿ ನಿಯಮ ಇಟ್ಟುಕೊಂಡು ಚರ್ಚೆ ಮಾಡುವುದಕ್ಕಿಂತ ನಮ್ಮ ಗೊತ್ತುವಳಿಯ ಮೂಲ ಉದ್ದೇಶವನ್ನು ಅರ್ಥಮಾಡಿಕೊಂಡರೆ ಒಳ್ಳೆಯದು. ಮುಖ್ಯವಾಗಿ ಇದು ಕೇವಲ ಇಲ್ಲಿ ಕುಳಿತು ಕೊಂಡು ಹೇಳುವ ಮಾತಲ್ಲ. ಅಲ್ಲಿನ ಪರಿಸ್ಥಿತಿ ವಾಸ್ತವಿಕವಾಗಿ ನೋಡಿದ್ದೇನೆ. ಸರ್ಕಾರ ತಳೆಯುವ ನಿಲುವು ಏನು ಎಂಬ ವಿಚಾರ ತಿಳಿದುಕೊಂಡಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್. — ನೀವೂ ಅದೇ ದಾರಿಯಲ್ಲಿ ಹೋಗುತ್ತಿದ್ದೀರಿ. ತಾವು ಹೋಗಿ ನೋಡಿಬಂದಿದ್ದೀರಿ, ವರದಿ ಕೊಟ್ಟಿದ್ದೀರಿ, ಅಚ್ಚುಹಾಕಿದ್ದೀರಿ. ಸರ್ಕಾರ ಹೇಳುವುದನ್ನು ಕೇಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ.— ಮೂಲಭೂತವಾಗಿ ಮತ್ತು ಸಾರ್ವಜನಿಕವಾಗಿ ಸತ್ಯವಾದ ವಿಚಾರವನ್ನು ತಿಳಿಸುವುದರಲ್ಲಿ ಹಿಂದೂ ಮುಂದೂ ಆಗಿರುವ ಅಭಿಪ್ರಾಯ ಮೂಡಿದೆ.

ಶ್ರೀ ಡಿ. ದೇವರಾಜ್ ಅರಸ್.—ಶ್ರೀಮಾನ್ ಅಮ್ಮುಗಂರವರು he has suggested a way. ಸಭೆ ಅಡ್ಜರ್ನ್ ಮಾಡೋಣ, ಕುಳಿತು ಮಾತನಾಡೋಣ ಎಂದು ಹೇಳಿದರು. ಅದು ಒಂದು ವಿಚಾರ. ಆದರೆ ಶ್ರೀ ದೇವೇಗೌಡರು ಹೇಳುವ ಪ್ರಕಾರ ನಾವು ಇದನ್ನು ಚರ್ಚೆ ಮಾಡುವದಕ್ಕೆ ಸಾಧ್ಯವಿಲ್ಲ. ತಾವು ಯಾವುದಾದರೂ ಎರಡು ಮಾತುಗಳಲ್ಲಿ ತಮ್ಮ ಅಭಿಪ್ರಾಯ ಹೇಳಿ. ಈಗಾಗಲೇ ಎಷ್ಟೋ ಹೇಳಿಕೆಗಳು ಪತ್ರಿಕೆಯಲ್ಲಿ ಬಂದಿವೆ. ಅನೇಕರು ಪತ್ರಿಕೆಯಲ್ಲಿ ಹೇಳಿರುವುದು, ನೀವು ಹೇಳಿರುವದು ಮತ್ತು ನಾವು ಹೇಳಿರುವುದು ಎಲ್ಲಾ ಪತ್ರಿಕೆಯಲ್ಲಿದೆ. ಈ ಸಭೆಯಲ್ಲಿ ನೀವು ಹೇಳುವುದಕ್ಕೆ ಅವಕಾಶವಿದೆ, ನಾವು ಹೇಳುವುದಕ್ಕೂ ಅವಕಾಶವಿದೆ. ಇದರಲ್ಲಿ ವಿಚಾರ ಬಂದಾಗ ನೀವು ಹೇಳತಕ್ಕದ್ದು ಆಗತ್ಕವೇ ಇಲ್ಲವೇ ಎಂಬುದನ್ನು ಚರ್ಚೆ ಮಾಡಿಕೊಂಡು ಏನಾದರೂ ಮಾಡಬಹುದು. ನೀವು ಹೇಳುವುದನ್ನು ಹೇಳಿ, ನಾವು ಹೇಳುವುದನ್ನೂ ಕೇಳುವುದಕ್ಕೆ ತಂಗಾರಿಲ್ಲವೆಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲರೂ ಸೇರಿರತಕ್ಕ ಒಂದು ನಮಿತಿ ಮಾಡೋಣ.

ಶ್ರೀ ಡಿ. ದೇವರಾಜ್ ಅರಸ್.—ತಾವು ನಮಿತಿ ಮಾಡಿ ಎಂದು ಹೇಳುವುದು ಆದರೆ we shall adjurn and discuss.

ಶ್ರೀ ಎಚ್. ಡಿ. ದೇವೇಗೌಡ.—ನಭಾನಾಯಕರು ಏನು ಹೇಳುತ್ತಾರೆ ಅದನ್ನು ಒಪ್ಪುವುದಕ್ಕೆ ತಯಾರಿದ್ದೇನೆ. ಗಾರ್ನಮೆಂಟ್ ಹೇಳತಕ್ಕದ್ದನ್ನು ಕೇಳಬಾರದು, ಕಿವಿಗೆ ಹತ್ತಿ ಹಾಕಿಕೊಂಡು ಇರಬೇಕು ಎನ್ನುವ ಪಾಠ ನಾವು ಮಾಡಿಲ್ಲ. ರೆವಿನ್ಯೂ ಮಂತ್ರಿಗಳು ಇದರ ಬಗ್ಗೆ ಏನಾದರೂ ಓದಿದರೆ ಕೇಳುವುದಕ್ಕೆ ತಯಾರಿಲ್ಲ ಎಂದು ಇದರ ಬಗ್ಗೆ ರೆವಿನ್ಯೂ ಮಂತ್ರಿಗಳು ಮೋಷನ್ ಮೂವ್ ಮಾಡುವುದಕ್ಕೆ ಎದ್ದಾಗ ನಾನು ಹೇಳಿದ್ದು. ಸರ್ಕಾರದ ಜೊತೆಸಹಕಾರ ಮಾಡುವುದಕ್ಕೆ ತಯಾರಿಲ್ಲ ಎನ್ನುವ ಪಾಠ ನನ್ನದಲ್ಲ. ಅಥವಾ ಸಭೆಯು ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡಬೇಕು ಎನ್ನುವ ಹಿನ್ನೆಲೆಯಿಂದ ನಾವು ಬಂದಿಲ್ಲ. ಇವೊತ್ತು ನಮ್ಮ ಮುಂದೆ ಇರತಕ್ಕ ಸಮಸ್ಯೆ ಒಂದು ಕರಾರು ವಾಕ್ಯಾಗಿ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುವುದರಿಂದ ಹೆಚ್ಚು ಉಪಯುಕ್ತವಾಗುತ್ತದೆ ಎನ್ನುವುದು. ಒಂದುವೇಳೆ ಕೂತು ಚರ್ಚೆ ಮಾಡೋಣ ಎಂದರೆ ನನ್ನ ಅಡ್ಡಿ ಇಲ್ಲ. I am prepared to co-operate.

Sri D. DEVARAJ URS.—Then Madam, I submit that is why I said in the beginning and I again appeal to the hon. Leader of the Opposition what I have said I am repeating. Under rule 279 you were pleased to say you have admitted the motion. I don't say you should not have admitted. When the ruling is there we shall be glad to discuss. But the rule says that the House can vote upon the motion. I also mentioned it and it is on record. It is left to the House whether to go on for voting or otherwise also come to any understanding. But in the meanwhile the hon. Leader of Opposition did mention that the Minister should not make a statement. What is this? Why do you want to deny us the powers that are given under rules? Even if he makes a statement where is it stated that we should not sit and discuss? Am I going to suggest that because there is provision for voting we are going to vote it down? I never said that. The spirit of your resolution or motion even if he makes a statement that statement would not be finished next minute. That is going to be discussed to-day. We can discuss it again. We can sit and discuss. If that is your idea we shall come to some understanding. That is my appeal. At no time I say it should not be done. Even now I appeal to you let the statement be made. Merely because statement is made I don't say that we do not discuss it. It looks as if we are going to do it under a particular condition only. It is not so.

ಶ್ರೀ ಎಸ್. ವೈ. ಪಾಟೀಲ್.—ನೀವು ಅವರ ಬಗ್ಗೆ ಸಹಾನುಭೂತಿಯುಳ್ಳವರು. ನಾವು ಕಷ್ಟದಲ್ಲಿ ಇದ್ದವರು ನಮ್ಮ ಮಾತು ಕೇಳಿಕೊಂಡು ತಾವು ಏನು ಮಾಡುತ್ತಿರೋ ಮಾಡಿ. ರೂಲ್ಸ್ ರೆಗ್ಯೂಲೇಷನ್ ಇರಲಿ. ಹುಚ್ಚಮಾಸ್ತಿಗೌಡರು ಸ್ಟೇಟ್‌ಮೆಂಟ್ ಕೊಡಬಹುದು. ಜೀಪ್ ಮಿನಿಷ್ಟರ್ ರವರೂ ಕೂಡ ಸ್ಟೇಟ್‌ಮೆಂಟ್ ಕೊಡಬಹುದು. ಆದರೂ ನಮಗೆ ಯಾರಿಗೂ ಅಲ್ಲಿನ ಪರಿಸ್ಥಿತಿಯ ಅರಿವು ಸರಿಯಾಗಿಲ್ಲ. ಪಾರ್ಟಿ, ಓಟು, ರೂಲ್ಸ್ ಇದನ್ನೆಲ್ಲಾ ಬಿಟ್ಟು ದಯಾ ಭಾವ ದೃಷ್ಟಿಯಿಂದ ನೋಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀ ಆರ್ಮುಗಂರವರು ಹೇಳಿದಂತೆ ಒಂದು ಕಮಿಟಿಮಾಡಿ ಅವರ ವರದಿ ಬರಲಿ. ಅಸೆಂಬ್ಲಿ ಬಂದ್ ಆಗುವುದಿಲ್ಲ. ನಮಗೆ ಭತ್ಯೆಬೇಡ ಸರ್ಕಾರಕ್ಕೆ ಖರ್ಚು ಆಗುವುದುಬೇಡ, ಕಮಿಟ ಅವರು ಅಲ್ಲಿಗೆಹೋಗಿ ನೋಡಿಕೊಂಡು ಬಂದು ವರದಿಮಾಡಲಿ. ಆನಂತರ ತಾವು ತಮಗೆ ತಿಳಿದಂತೆ ಮಾಡಿರಿ.

ಶ್ರೀ ಎಚ್. ಸಿದ್ದವೀರಪ್ಪ.—ಕಮಿಟ ಮಾಡಿದರೆ ಹೊಟ್ಟೆ ತುಂಬುತ್ತದೆಯೇ?

ಶ್ರೀ ಎಸ್. ವೈ. ಪಾಟೀಲ್.—ಯಾವ ಸಿವಿಲ್ ಸರ್ಜನ್‌ಗೂ ಕೂಡ ರೋಗ ತಿಳಿದಮೇಲೆ ಔಷಧಿ ಕೊಡುವುದಕ್ಕೆ ಬರುತ್ತದೆಯೇ ಹೊರತು ರೋಗ ಗೊತ್ತಿಲ್ಲದೆ ಇದ್ದರೆ ಹೇಗೆ ಔಷಧಿ ಕೊಡು ತ್ತಾರೆ? ಇದು ಅಸೆಂಬ್ಲಿ ನಡೆಯುತಕ್ಕ ಪ್ರಶ್ನೆ ಇಲ್ಲ. ಜನರ ನಾವು ನೋಪಿನ ಪ್ರಶ್ನೆ. ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಶ್ರೀವಾನ್ ಆರ್ಮುಗಂರವರು ಹೇಳಿದಂತೆ ಅರ್ಧಗಂಟೆ ಸಭೆ ಅಡ್‌ಜರನ್ ಮಾಡಿರಿ. ತಾವು ಅವರು ಕೂಡಿಕೊಂಡು ಹೋಗಿ ಸಮಸ್ಯೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಿರಿ. ಸಮಸ್ಯೆ ತಿಳಿದರೆ ಬಿಡಿಸುವುದಕ್ಕೆ ಬರುತ್ತದೆ. ತಿಳಿಯದೆ ಇದ್ದರೆ ಸ್ಟೇಟ್‌ಮೆಂಟ್ ಇನ್‌ಕಂಪ್ಲೀಂಟ್ ಆಗುತ್ತದೆ. ವಾದ ವಿವಾದ ಮಾಡುವುದು ಬೇಡ. ನಮ್ಮನ್ನು ಅನಾಥ್ಯಾಶ್ರಮದಲ್ಲಿ ಬಿಟ್ಟ ಹಾಗಾಗುತ್ತದೆ. ಬಿಜಾಪುರ ಜಿಲ್ಲೆ ಗುಲ್ಬರ್ಗ ಜಿಲ್ಲೆಯವರು ಯಾವ ಜಿಲ್ಲೆಯವರು ಬೇಕೋ ಅವರೆಲ್ಲರೂ ಕೂಡಿಕೊಂಡು ವಿಚಾರಮಾಡಿರಿ. ಇನ್ನೊಂದು ನಾಲ್ಕುಗಂಟೆ ಕಾಲ ಲ್ಯಾಂಡ್ ರೀ ಫಾರಂ ಬಗ್ಗೆ ಚರ್ಚೆ ಆಗಲಿ.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳುವುದನ್ನು ತಿಳಿಯೋಣ, ನಾವು ಹೇಳುವುದನ್ನು ತಿಳಿದುಕೊಳ್ಳಲಿ ಎಂದು ಮೋಷನ್ ತಂದಿರುವುದು.

ಶ್ರೀ ಎಸ್. ವೈ. ಪಾಟೀಲ್.—ಅಲ್ಲಿನ ವಾಸ್ತವಿಕ ದೃಶ್ಯ ತಿಳಿಯದೆ ಏನು ಹೇಳುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ನೀವು ತಿಳಿದುಕೊಂಡು ಬಂದಿರುವವರು ಇದ್ದೀರಿ, ಅನುಭವಸ್ಥರು, ಕಷ್ಟಪಟ್ಟು ಕೃಷಿರಾಗಿ 20 ಪೌಂಡು ಇಳಿದು ಹೋಗಿದ್ದೀರಿ, ನೀವು ಹೇಳಿ ನನ್ನ ಅಭ್ಯಂತರ ಏಲ್ಲ. ನಿಮ್ಮ ಹಾಗೆ ನೋಡಿಕೊಂಡು ಬಂದಿರುವವರು ಬೇರೆಯವರು ಇದ್ದಾರೆ. ನಾನು ಹೊರಗಡೆಯಿಂದ ಬಂದಿರುವವನು.

ಶ್ರೀ ಎಚ್. ಡಿ ದೇವೇಗೌಡ.—I take strong objection. ಈ ತರಹ ಇನ್‌ಸಿನ್ಯೂಷನ್ ಬರುವ ರೀತಿ ಮಾತನಾಡುವುದು ಸರಿಯಲ್ಲ. ಅವರು 20 ಪೌಂಡು ಇಳಿದಿದ್ದರೆ, ಸರ್ಕಾರದವರು 50 ಪೌಂಡು ಏರಿದ್ದೀರಿ ಎಂದು ನಾನು ಹೇಳುತ್ತೇನೆ What is the use of speaking like that?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದ ವತಿಯಿಂದ ನಾವು ಹೇಳುವುದನ್ನು ತಾವು ಕೇಳಿ, ಅನೇಕರು ಆ ಸ್ಥಳದಿಂದ ಬಂದಿರುವವರು ಇದ್ದಾರೆ, ಅದೇ ರೀತಿ ಅನೇಕರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರುವವರು ಇದ್ದಾರೆ. ಅವರು ಹೇಳುವುದರಲ್ಲಿ ಸತ್ಯ ಇದೆಯೇ, ಇಲ್ಲವೇ ತಪ್ಪು ಇದೆಯೇ, ಇಲ್ಲವೇ ಇದು ಆಗಿಲ್ಲ ಎಂದು ಹೇಳಿ. ಕೂಡಲೆ ಆಗಬೇಕೇ ಅಥವಾ ಬಿಡಬೇಕೇ ಎಂದು ನಾನು ತೀರ್ಮಾನ ಹೇಳುತ್ತಾ ಇಲ್ಲ. ಮಾನ್ಯ ದೇವೇಗೌಡರು ತಂದ ಮೋಷನ್ ವಿಚಾರ ಏನು ಮಾಡಬೇಕು ಎಂದು ಕೂತುಕೊಂಡು ಚರ್ಚೆ ಮಾಡೋಣ ಎಂದು ಹೇಳುತ್ತಿದ್ದೇನೆ. ಆದರೆ ಮೋಷನ್ ಮೂವ್ ಮಾಡುವುದು ಬೇಡ, ಸ್ಟೇಟ್‌ಮೆಂಟ್ ಬೇಡ ಎಂದು ಹೇಳಿದರೆ, ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ವಿಷಯವನ್ನು ಪ್ರೆಸ್ಟೀಜ್ ಇಷ್ಯೂ ಮಾಡುವುದು ಸರಿಯಲ್ಲ. ಪ್ರೆಸ್ಟೀಜ್ ಇಷ್ಯೂ ಮಾಡಬೇಕೆಂದು ನಾವು ಹೊರಟಿಲ್ಲ. ಬಹಶಃ ರೂಲ್ಸ್ ಪ್ರಕಾರ ಮೂವ್ ಮಾಡುವುದಕ್ಕೆ ಅವಕಾಶ ಇದೆ. ಮಾನ್ಯ ಚೆನ್ನಬಸಪ್ಪನವರು ರೂಲ್ಸ್ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದಾರೆ. ರೂಲ್ಸ್ ಬಿಚ್ಚಿ ಬಿಚ್ಚಿ ಹೇಳಿ ಸರ್ಕಾರದ ಪರವಾಗಿ ಭಾಷಣ ಬಿಡುವವರು ಅವರು. ಅವರಿಗೆ ಆ ಚಟ ಹೋಗಿಲ್ಲ. ನಿಮ್ಮ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಸಿದ್ದವೀರಪ್ಪನವರು ಮಾತನಾಡುತ್ತಾ ಅಂದರು, ಸಮಿತಿ ಮಾಡುವುದರಿಂದ ಹೊಟ್ಟೆ ತುಂಬುತ್ತದೆಯೋ ಎಂದು? ಇವರ ಫೋಟೋ ನೋಡುವುದರಿಂದ ಹೊಟ್ಟೆ ತುಂಬುತ್ತದೆಯೇ ಎಂದು ನಾನು ಕೇಳುತ್ತೇನೆ.

(ಶ್ರೀ ವಾಟಾಳ್ ನಾಗರಾಜ್)

ಮಾನ್ಯ ಅರಸು ಅವರು ಮಾನ್ಯ ಹಿರಿಯ ಸದಸ್ಯರಾದ ಎಸ್. ಬೈ. ಪಾಟೀಲರು 20 ಪೌಂಡು ಕಡಿಮೆಯಾಗಿದ್ದಾರೆ ಎಂದು ಹೇಳಿದರು. ನನಗೆ ಬಂದ ವರದಿ ಪ್ರಕಾರ ಮಂತ್ರಿಗಳು ಪ್ರವಾಸ ಹೋದ ಕಾಲದಲ್ಲಿ 400 ಕೋಳಿಗಳು, 250 ಕುರಿಗಳು ಸತ್ತಿವೆ. ಮಾನ್ಯ ಪಾಟೀಲರು ಎಲ್ಲರಿಗೂ ಹಿರಿಯರಾದ ಸದಸ್ಯರು, ಅವರ ವಿಚಾರದಲ್ಲಿ ಈ ರೀತಿ ಹೇಳಿದರೆ ಹೇಗೆ? It is a very serious allegation. ನಾನು ಜಮಖಂಡಿಗೆ ಹೋಗಿದ್ದೆ, ಆಗ ಅಲ್ಲಿಗೆ ಬಂದ ಮಂತ್ರಿಗಳ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಬರುತ್ತಾರೆ ಎಂದು 250 ಕೋಳಿಗಳನ್ನು ಬಲಿ ಹಾಕಿ ಕಾದಿದ್ದರು. ನಾನು ಲಘುವಾಗಿ ಮಾತನಾಡುತ್ತಿದ್ದೇನೆ ಎಂದು ಯಾರೂ ತಿಳಿಯಬಾರದು, ನನ್ನ ಮಾತಿನಿಂದ ನಗು ಬರಬಹುದು. ಮುಖ್ಯಮಂತ್ರಿಗಳು ಇವತ್ತು, ವಯೋವೃದ್ಧರು ಮುದುಕರಾದ ಪಾಟೀಲರನ್ನು ನೋಡಿ 20 ಪೌಂಡು ಕಡಿಮೆಯಾಗಿದ್ದಾರೆ ಎಂದು ಹೇಳಿದರು, ಅನ್ನ ಆಹಾರ ಕೊಡದಿದ್ದರೆ 50 ಪೌಂಡು ಕಡಿಮೆಯಾಗುತ್ತಾರೆ.

ಅಧ್ಯಕ್ಷರು.—ನಾನು ತಿಳಿದುಕೊಂಡಿರುವ ಪ್ರಕಾರ ಮುಖ್ಯಮಂತ್ರಿಗಳು ತಮಗೆ ಹಾಸ್ಯ ಮಾಡುವುದಕ್ಕೆ ಹೇಳಲಿಲ್ಲ, ತಾವು ಕಷ್ಟಪಟ್ಟು ಕೊರಗಿ ಹೋಗಿದ್ದೀರಿ ಎಂದು ವಾತ್ಸಲ್ಯದ ಮೇಲೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರ ವ್ಯಾಖ್ಯಾನ ಚೆನ್ನಾಗಿದೆ, ನಿಮ್ಮ ವ್ಯಾಖ್ಯಾನದ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ಪಾರ್ಟಿಯ ಸದಸ್ಯರು ಯಾರೊಬ್ಬರೂ ಸಮಿತಿಯಲ್ಲಿಲ್ಲ. ಇದು ಪಾರ್ಟಿ ಪಾಲಿಟಿಕ್ಸ್ ಮಾಡುವ ಕಮಿಟಿಯಲ್ಲ. ತಾವು ಸಮಿತಿಯನ್ನು ಒಪ್ಪಿಕೊಂಡು ಬಿಡಿ, ಅದರಿಂದ ದೊಡ್ಡ ಪ್ರಮಾದವೇನೂ ಆಗುವುದಿಲ್ಲ; ತೊಂದರೆಯೇನೂ ಆಗುವುದಿಲ್ಲ. ಈ ಸಮಿತಿಯನ್ನು ಒಪ್ಪಿಕೊಳ್ಳಿ.

ಅಧ್ಯಕ್ಷರು.—ಸಮಿತಿಯನ್ನು ಮಾಡುತ್ತಾರೆ ಎಂದು ಹೇಳಲಿಲ್ಲ, ಮಾಡುವುದಿಲ್ಲ ಎಂದು ಹೇಳಲಿಲ್ಲ ತಾವು ಊಹಿಸಿಕೊಂಡು ಏತಕ್ಕೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದಿಂದ ಏನು ಉತ್ತರ ಬರುತ್ತದೆ ಎಂದು ತಮಗೂ ಗೊತ್ತಿದೆ; ನಮಗೂ ಗೊತ್ತಿದೆ. ಪರಿಸ್ಥಿತಿ ಉಲ್ಬಣವಾಗಿದೆ, ರಾಜಕೀಯ ಬಿಟ್ಟು ಬಿಟ್ಟು ನಾವು ಹೇಳಿದಂತೆ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿದಕ್ಕೆ ಒಂದು ಫಾರಂನಲ್ಲಿ ಒಪ್ಪಿಕೊಳ್ಳಿ ಎಂದು ಹೇಳಿದರು.

Then, I will really consider this. I am anxious to take the co-operation of all the Members of the Opposition parties also. We will consider in what manner it should be done. Let this discussion go on. Why don't you allow the Minister to make a statement? If you allow him to make a statement, nothing will be lost. I have never uttered a word that we are in majority and we are going to vote it down. If you honestly mean that we should all co-operate and do it, I take it that it is an honest intention. I am not at all against it. I am equally anxious that when you have come forward to co-operate, we shall take it in that form, we shall discuss and come to some understanding.

Sri M. S. KRISHNAN.—If the suggestion is that the Minister will make a statement and then this House will be adjourned and then you consider the proposal, that may be all right."

Sri D. DEVARAJ URS.—The Minister may make a statement and we can adjourn and discuss. But the debate will go on for a day or two.

Sri C. M. ARUMUGAM.--There is no question of making any statement.

ಶ್ರೀ ಎಂ. ಎಸ್. ಕೃಷ್ಣನ್.—ಮಿನಿಸ್ಟರು ಸ್ಟೇಟ್‌ಮೆಂಟ್‌ಮೆಂಟ್ ಮಾಡಬೇಕಾಗಿದ್ದರೆ ನಾವು ಕೇಳುವುದಕ್ಕೆ ತಯಾರಿಲ್ಲ ಎಂದು ಅಲ್ಲ, ಕೇಳುತ್ತೇವೆ— ಮುಖ್ಯಮಂತ್ರಿಗಳು ಹೇಳಿರುವ ಹಾಗೆ ಎಲ್ಲ ಸದಸ್ಯರ ಕೋ-ಆಪರೇಷನ್ ತಗೆದುಕೊಳ್ಳಬೇಕು, ಈಗ ಅರ್ಧ ಗಂಟೆ ಅಡ್ಜರ್ನ್ ಮಾಡಿ, ವಿರೋಧ ಪಕ್ಷದ ನಾಯಕರು, ಸಭಾನಾಯಕರು ಮತ್ತು ನಮಿತಿಯ ಕೆಲವು ಸದಸ್ಯರು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟನಂತರ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು. ಆ ರೀತಿ ಮಾಡುವುದಕ್ಕೆ ಒಪ್ಪಿದರೆ ಆಗಬಹುದು.

[*Sri N. Hutchamasty Gowda (Minister for Revenue) stood up to read the statement.*]

(The opposition members sat on the aisle of the Assembly and went on repeating the slogans like 'no, on' and 'shame, shame')

Sri N. HUTCHAMASTHY GOWDA (Minister for Revenue) Sir,.....

(Interruptions)

Madam SPEAKER.—The House will adjourn for Tea and will meet after half-an-hour.

The House rose for Tea at Five Minutes Past Three of the clock and reassembled at four Minutes past four of the clock.

[Madam SPEAKER in the Chair.]

(ವಿರೋಧ ಪಕ್ಷದ ಸದಸ್ಯರು ವೇದಿಕೆಯ ಮುಂದೆ ಹೋಗೆಯೇ ಕುಳಿತಿದ್ದರು)

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಹೆಜ್ಜೆ).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಇಲ್ಲಿ ಬಹಳ ವಿಷಾದಕರವಾದಂತಹ ಒಂದು ಘಟನೆ ನಡೆದಿದೆ. ಹಿಂದೆ ಎಂದೂ ನಾನು ಇಂತಹ ನನ್ನ ಜೀವಿತವನ್ನು ನೋಡಿರಲಿಲ್ಲ? ಇದೇ ಪ್ರಥಮವಾಗಿ ನೋಡುತ್ತಿರುವುದು. ಇದಕ್ಕೆ ಕಾರಣವೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ದೇವೇಗೌಡರು ಒಂದು ಠರಾವನ್ನು ಮಂಡಿಸಿ ಅಲ್ಲಿನ ಬರಗಾಲ ಪರಿಸ್ಥಿತಿಯನ್ನು ನೋಡಿಕೊಂಡು ಬಂದು, ಮಾನ್ಯ ಮುಖ್ಯಮಾಸ್ತಿಗೌಡರ ಠರಾವಿಗೂ ಯಾವ ರೀತಿಯಲ್ಲಿ ಬೆಂಬಲ ಕೊಡಬಹುದೆಂಬುದನ್ನು ತೀರ್ಮಾನ ಮಾಡಬಹುದು ಎಂದು ಕೇಳಿಕೊಂಡಿದ್ದಾರೆ. ಆ ಠರಾವಿಗೆ ಸರಿಯಾದ ಅನುಮತಿ ದೊರೆಯದಿದ್ದ ಕಾರಣ ವಿರೋಧ ಪಕ್ಷದ ಸದಸ್ಯರು ಅವರ ಅಸಮಾಧಾನವನ್ನು ಸೂಚಿಸುವುದಕ್ಕೋಸ್ಕರ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರ ಉದ್ದೇಶವಾದರೂ ಅಲ್ಲಿನ ಜನರಿಗೆ ಸಾಕಷ್ಟು ಸಹಾಯ ಮತ್ತು ಅನುಕೂಲಗಳನ್ನು ಕಲ್ಪಿಸಿಕೊಡಬೇಕೆನ್ನುವ ದೃಷ್ಟಿಯಲ್ಲವೆ ಕೇವಲ ಸರ್ಕಾರವನ್ನು ಟೀಕೆ ಮಾಡಬೇಕು ಎನ್ನುವ ಭಾವನೆಯಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಒಂದು ಘಟನೆಯನ್ನು ಮುಕ್ತಾಯ ಮಾಡಬೇಕು ಈ ಘಟನೆ ಹೀಗೆಯೇ ನಡೆದುಕೊಂಡು ಬಂದರೆ, ಅಲ್ಲಿರತಕ್ಕ ಜನರ ಗತಿ ಏನಾಗಬಹುದೆಂಬುದನ್ನು ನಾವು ಯೋಚನೆ ಮಾಡಬೇಕು. ಆದ್ದರಿಂದ ಸರ್ಕಾರದವರು ಅಧಿಕ ಸಂಖ್ಯೆಯಲ್ಲಿದ್ದರೂ ಜನತೆಯ ಮೇಲೆ ಸಹಾನುಭೂತಿವುಳ್ಳ ಸಭಾನಾಯಕರು ಇದರ ಬಗ್ಗೆ ಏನಾದರೂ ಒಂದು ಸರಿಯಾದ ನಿಲುವನ್ನು ತೆಗೆದುಕೊಂಡು ಈ ಅಹಿತ ಘಟನೆಯನ್ನು ಕೊನೆಗಾಣಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಸಭಾನಾಯಕರು ಒಂದು ಹೇಳಿಕೆಯನ್ನು ಕೊಟ್ಟು ವಿರೋಧ ಪಕ್ಷದ ನಾಯಕರು ಮಂಡಿಸಿರುವ ಸಲಹೆಗೂ ಸಾಕಷ್ಟು ಮಾನ್ಯತೆ ದೊರೆಯುವಂತೆ ಮಾಡಿ, ಈ ಘಟನೆಯನ್ನು ಮುಕ್ತಾಯ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ನಾಗಣ್ಣನವರು ಹೇಳಿದಂತಹ ವಿಚಾರಗಳನ್ನೆಲ್ಲಾ ನಾನು ಕೇಳಿದ್ದೇನೆ. ನಾವು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ಮಾತು ಮತ್ತು ಮುಂಡಿಸಿದಂತಹ ನಿರ್ಣಯ ಇವುಗಳ ಬಗ್ಗೆ ವಿರೋಧವಾದ ಮಾತುಗಳನ್ನು ಯಾವತ್ತೂ ಹೇಳಲಿಲ್ಲ. ಈಗ ನಡೆದಂತಹ ಚರ್ಚೆಯ ಬಗ್ಗೆ ಸಹ ಯಾವ ಸಂದರ್ಭದಲ್ಲಿಯೂ ಅವರು ಹೇಳಿದ್ದನ್ನು ತಿರಸ್ಕರಿಸುತ್ತೇವೆ ಅಥವಾ ಗಮನಿಸುವುದಿಲ್ಲ ವೆಂದು ಯಾವ ಹಂತದಲ್ಲಿಯೂ ಹೇಳಿಲ್ಲ; ಈಗಲೂ ಅದನ್ನು ಹೇಳುತ್ತಾ ಇಲ್ಲ. ತಾವು ಅಧ್ಯಕ್ಷರಾಗಿ ಅದು ಯಾವ ರೀತಿ ಇರಬೇಕೆಂದು ಹೇಳಿದ್ದೀರಿ; ಮತ್ತು, ನಾವು ಆಗಬಹುದು ಎಂದು ಒಪ್ಪಿಕೊಂಡಿದ್ದೇವೆ. ನಮ್ಮ ಮಂತ್ರಿಯವರು ಅವರ ಪೋಷನನ್ನು ಇಟ್ಟಮೇಲೆ ಇವರದ್ದು ಸಹ ಅದಕ್ಕೆ ಸಂಬಂಧಪಟ್ಟದ್ದು ಆಗಿರುವುದರಿಂದ, ಎರಡೂ ಚರ್ಚೆಯಾಗಿ; ಸದಸ್ಯರು ಯಾವ ಸಲಹೆ ಕೊಟ್ಟರೂ ಅದನ್ನು ಕೇಳೋಣ ಎಂದು ಹಿಂದೆಯೂ ಹೇಳಿದ್ದೆ; ಈಗಲೂ ಹೇಳುತ್ತಿದ್ದೇನೆ. ಶ್ರೀಮಾನ್ ದೇವೇಗೌಡರು ಕೊನೆಯದಾಗಿ ಹೇಳಿದ ಮಾತನ್ನು ಕೂಡ ನಾನು ಒಪ್ಪುತ್ತೇನೆ. ಅವರು ಇದರಲ್ಲಿ ರಾಜಕೀಯವಿಲ್ಲ, ಅಲ್ಲಿಯ ಕೆಲವು ವಿಷಯಗಳನ್ನು ತಿಳಿಯೋಣ ಎಂದು ಹೇಳಿದರು. ಹೌದು, ಅದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಅದರ ಹಿನ್ನೆಲೆಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀ ಮಾನ್ ನಾಗಣ್ಣನವರು ಸಹ ಅದನ್ನು ಸ್ಪಷ್ಟಪಡಿಸಿ ಹೇಳಿದ್ದಾರೆ. ನಾವಾದರೂ ಈ ಸಭೆಯಲ್ಲಿ ನಿರ್ಣಯ ಬರುವುದಕ್ಕೆ ಮುಂಚೆ ಇದರ ಬಗ್ಗೆ ಪೂರ್ವಭಾವಿಯಾಗಿ ಸ್ಪಷ್ಟಪಡಿಸಿ ಹೇಳಿದ್ದೇನೆ. ಯಾವ ರಾಜಕೀಯ ಪಕ್ಷದವರೇ ಆಗಲಿ, ಅವರು ಉತ್ತಮವಾದ ಸಲಹೆಯನ್ನು ಮಾಡಿದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆಂದು ನಾನು ಪ್ರೆಸ್ ಕಾನ್‌ಫರೆನ್ಸಿನಲ್ಲಿಯೂ ಹೇಳಿದ್ದೇನೆ; ಮತ್ತು ಅದು ಪತ್ರಿಕೆಗಳಲ್ಲಿಯೂ ಬಂದಿದೆ. ನಾನು ತಮ್ಮ ಪಕ್ಷದವರು ಹೇಳಿದ್ದನ್ನು ಮಾತ್ರ ಕೇಳಬೇಕೆಂದು ಏನೂ ಇಲ್ಲ. ಆದರೂ ನನ್ನ ಮೇಲೆ ಕೆಲವರು ಆಪಾದನೆ ಮಾಡಿರಬಹುದು. ಅದನ್ನು ಹಿಂದೆಯೂ ಹೇಳಿದ್ದೇನೆ. ಈಗ ಬಂದಿರತಕ್ಕ ನನ್ನ ವೇಶ ಯಾರೂ ಮನುಷ್ಯರು ನಿರ್ಮಿಸಿದ ನನ್ನ ವೇಶವಲ್ಲ. ಇದು ದೈವೀಕೃತವಾಗಿ ಬಂದಿರತಕ್ಕ ನನ್ನ ವೇಶ. ಮಳೆಯ ಆಭಾವವನ್ನು ಯಾರೂ ಇಲ್ಲದ ಹಾಗೆ ಮಾಡುವುದಕ್ಕಾಗುವುದಿಲ್ಲ.

ಇಂಥಾ ಪರಿಸ್ಥಿತಿ ಬಂದರೆ ಅದನ್ನು ನಾವು ಧೈರ್ಯವಾಗಿ ಎದುರಿಸುವುದಕ್ಕೆ ಸರ್ಕಾರದ ಮಟ್ಟದಲ್ಲಾಗಲೀ ಅಥವಾ ಇತರೇ ಜಾಗಕ್ಕೆ ಜನರಾಗಲೀ ಯಾವರೀತಿ ಅದನ್ನು ಎದುರಿಸಬೇಕು, ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ನಾನು ಹಿಂದೆಯೇ ಹೇಳಿದ್ದೇನೆ ಈಗ ಸರ್ಕಾರ ಮಾಡಿರತಕ್ಕಂಥಾದ್ದೇ ಅಜ್ಜೆರು ತೀರ್ಮಾನ, ನಾವು ಮತ್ತೆ ಏನೂ ಮಾಡಬೇಕಾದ್ದಿಲ್ಲ ಎಂದು ನಾವು ಯಾವಾಗ್ಯೂ ಹೇಳಲಿಲ್ಲ. ಈ ವಿಚಾರದಲ್ಲಿ ಯಾರೇ ಆಗಲಿ ಸರ್ಕಾರ ಅಂತಿಮವಾಗಿ ಮಾಡಿದೆ, ಇನ್ನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಯಾವ ಪಾರ್ಟಿಯ ಸರ್ಕಾರವೂ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹಿಂದೆಯೇ ಹೇಳಿದ್ದೇನೆ. ಈ ವಿಚಾರದಲ್ಲಿ ಸರ್ಕಾರ ಎಷ್ಟು ಮಾಡುವುದಕ್ಕೆ ಸಾಧ್ಯವಿದೆ ಅಷ್ಟನ್ನು ಮಾಡುವುದಕ್ಕೆ ಆ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ನಾನು ಹೇಳಿದ್ದೇನೆ. ಈಗಲೂ ನಾನು ಅದನ್ನೇ ಹೇಳುತ್ತೇನೆ. ಒಂದು ವೇಳೆ ಆ ಬಗ್ಗೆ ಮಾಡಬೇಕಾದ ಕಾರ್ಯಕ್ರಮಗಳಲ್ಲಿ ಇಂಥಾದ್ದು ಮಾಡಬೇಕು ಎಂದು ವಿರೋಧ ಪಕ್ಷದವರು ಸಲಹೆ ಮಾಡಿದರೆ ಅವುಗಳನ್ನು ನಾವು ತೆಗೆದುಕೊಳ್ಳೋಣ. ಅಥವಾ ನಾವು ಮಾಡತಕ್ಕಂಥಾ ಕಾರ್ಯಕ್ರಮಗಳು ಸ್ವಲ್ಪ ವಿಳಂಬವಾಗಿದೆ ಎಂದರೆ ಅದನ್ನು ಜರೂರಾಗಿ ಮಾಡುವುದಕ್ಕೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಇದನ್ನು ನಾನು ಈಗ ಹೊಸದಾಗಿ ಹೇಳುತ್ತಿಲ್ಲ. ಹಿಂದೆ ಸಂದರ್ಭ ಬಂದಾಗ ಎಲ್ಲ ವನ್ನೂ ಈ ಸಭೆಗೆ ಮುಂದೆಯೇ ನಾನು ಹೇಳಿದ್ದೇನೆ. ಆದ್ದರಿಂದ ನಾನು ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರಲ್ಲ ಮತ್ತು ಸಭಾಸದಸ್ಯರಲ್ಲ ನಾನು ಮನವಿ ಮಾಡಿಕೊಳ್ಳುವುದು ಏನೆಂದರೆ ಈಗ ಇದುವರೆಗೂ ನಡೆದಿರತಕ್ಕದ್ದು ಏನೇ ಆಗಲೀ ಅದನ್ನು ನಾವು ಮರೆತು ಈಗ ಈ ಸಭೆಯ ಕಾರ್ಯಕಲಾಪಗಳನ್ನು ಎರ್ಲಾ ಕೂಡಿ ನಡೆಸತಕ್ಕಂಥಾ ಒಂದು ಪರಿಸ್ಥಿತಿಯನ್ನು ಉಂಟು ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷಣಿಯವರೇ ಇದುವರೆಗೂ ನಮ್ಮ ಸಭಾನಾಯಕರು ಏನು ತಿಳಿಸಿದ್ದಾರೆ ಆ ವಿಷಯದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ನಿನ್ನೆ ನನ್ನ, ಪೋಷನ್ ಅನ್ನು ಸಬ್‌ಸ್ಟಿಟ್ಯೂಟ್ ಪೋಷನ್ನಾಗಿ ಪರಿವರ್ತಿಸಿ ಈ ಸಭೆಯುಮುಂದೆ ಮುಂಡಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರು. ನಾನು ಪೋಷನ್ ಕಳುಹಿಸಿ ಕೊಟ್ಟ ಉದ್ದೇಶ ಇಷ್ಟೆ, ನಾನು ಯಾವ ಒಂದು ಪ್ರತಿಷ್ಠೆಗೋಸ್ಕರ ಆ ಪೋಷನ್ ಅನ್ನು ತರಲಿಲ್ಲ. ವಿರೋಧ ಪಕ್ಷದ ಮಾನ್ಯ ಮಿತ್ರರ ಪ್ರತಿಷ್ಠೆಯೂ ಇದರಲ್ಲಿ ಇಲ್ಲ.

ಮಾನ್ಯ ರೆವಿನ್ಯೂ ಮಂತ್ರಿಗಳ ಸ್ಟೇಟ್‌ಮೆಂಟ್ ಅನ್ನು ಒಂದು ಸಾರಿ ಚರ್ಚೆ ಮಾಡಿದಮೇಲೆ ಪುನಃ ಸರ್ಕಾರದವರು ನೇಮಕ ಮಾಡತಕ್ಕ ಅಧ್ಯಯನ ಸಮಿತಿಯವರು ಆ ಪ್ರದೇಶಕ್ಕೆ ಹೋಗಿ ನೋಡಿ ಕೊಂಡು ಬಂದು ಅವರು ಮಾಡತಕ್ಕ ವರದಿಯನ್ನು ಮತ್ತೆ ಚರ್ಚೆ ಮಾಡತಕ್ಕಂಥಾ ಅವಶ್ಯಕತೆ ಬೇಡ, ಕೆಲವು ವಾರದೊಳಗೆ ಸರ್ಕಾರದವರು ನೇಮಕ ಮಾಡತಕ್ಕ ಸಮಿತಿಯವರು ಆ ಪ್ರದೇಶಕ್ಕೆ ಹೋಗಿ ನೋಡಿ ಪರಿಶೀಲನೆ ಮಾಡಿ ಅವರ ಒಂದು ವರದಿಯನ್ನು ಕೊಟ್ಟ ಮೇಲೆ ಎಲ್ಲವನ್ನೂ ಒಟ್ಟಾರೆ ಕ್ರೋಢೀಕರಿಸಿ ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡತಕ್ಕದ್ದು ಆ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೆಚ್ಚು ಉಪಯೋಗವಾಗಬಹುದು ಎಂದು ಅಂದುಕೊಂಡಿದ್ದೇನೆ. ಅಲ್ಲಿರತಕ್ಕ ನೈಜವಾದ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ನೇಮಕ ಮಾಡತಕ್ಕ ಸಮಿತಿ ಏನಿದೆ ಅದು ಪಕ್ಷಾತೀತವಾದ ಸಮಿತಿ, ಅದು ಯಾವ ರಾಜಕೀಯ ಪಕ್ಷಕ್ಕೂ ಸಂಬಂಧವಿಲ್ಲ. ಅದು ಬೀವನ ಮರಣದ ಪ್ರಶ್ನೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದಹಾಗೆ ಆಭಾವಪರಿಸ್ಥಿತಿ ನಾವು ಕಲ್ಪನೆ ಮಾಡಿದ್ದಲ್ಲ. ಅದು ನ್ಯಾಚುರಲ್ ಕಲಾಮಿಟಿ. ಎಲ್ಲಾ ಪಕ್ಷದವರು ಸಹಕರಿಸಿ ಅದಕ್ಕೆ ತಮ್ಮ ಕೈಲಾದ ಮಟ್ಟಿಗೆ ಹೋರಾಟ ಮಾಡಬೇಕಾಗುತ್ತದೆ. ಈ ಒಂದು ಸಮಸ್ಯೆಯನ್ನು ಪಕ್ಷಾತೀತವಾಗಿ ಬಗೆಹರಿಸಬೇಕು. ಈ ಒಂದು "ಸಭೆಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಅದನ್ನು ಆ ಬರಗಾಲ ಪೀಡಿತ ಪ್ರದೇಶಕ್ಕೆ ಕಳುಹಿಸಿ ಅವರು ಅಲ್ಲಿನ ಪರಿಸ್ಥಿಯನ್ನು ಪರಿಶೀಲನೆ ಮಾಡಿ ಕೊಡತಕ್ಕ ವರದಿಯನ್ನು ಸೇರಿಸಿ ಮತ್ತು ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡತಕ್ಕ ಸ್ಟೇಟ್‌ಮೆಂಟ್ ಅನ್ನೂ ಸೇರಿಸಿ ಎಲ್ಲವನ್ನೂ ಕ್ರೋಢೀಕರಿಸಿಕೊಂಡು ಚರ್ಚೆ ಮಾಡುವುದು ಸೂಕ್ತ ಎಂದು ನಾನು ಸಬ್‌ಸ್ಟಿಟ್ಯೂಟ್ ಮೋಷನ್ ಅನ್ನು ಕಳುಹಿಸಿದ್ದೇನೆ. ಈಗ ನಡೆದಿರತಕ್ಕೆ ಘಟನೆಯ ಬಗ್ಗೆ ವಿರೋಧಪಕ್ಷದವರು ಸಂತೋಷಪಡುವುದಿಲ್ಲ. ವಿರೋಧಪಕ್ಷದ ಪ್ರತಿಯೊಬ್ಬ ಸದಸ್ಯರೂ ಕೂಡ ಈ ಸಭೆಯವರು ಮಾಡತಕ್ಕ ನಿಯಮಾವಳಿಯನ್ನು ಪರಿಪಾಲಿಸುವುದಕ್ಕೆ ಸಿದ್ಧರಾಗಿದ್ದಾರೆ. ಇದರ ಬಗ್ಗೆ ಹಿಂದೆ ಬೀಳುವುದಿಲ್ಲ. ಈ ಘಟನೆ ಆಗಬಾರದಾಗಿತ್ತು. ಇದು ನಾವು ಸಂತೋಷಪಡತಕ್ಕ ಘಟನೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಈ ಘಟನೆ ನಡೆದಿರತಕ್ಕದ್ದು ಪ್ರಜಾಪ್ರಭುತ್ವದ ಒಂದು ಸತ್‌ಸಂಪ್ರದಾಯ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಈ ಘಟನೆ ನಡೆಯತಕ್ಕ ಒಂದು ಸನ್ನಿವೇಶ ಆಗಬಾರದಾಗಿತ್ತು. ನಾನು ಇಷ್ಟು ಮಾತ್ರ ಸ್ಪಷ್ಟೀಕರಣ ಮಾಡುತ್ತೇನೆ. ವಿರೋಧ ಪಕ್ಷದವರ ಅಭಿಪ್ರಾಯ ಇಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಈ ವಿಷಯ ಪಕ್ಷಾತೀತವಾಗಿ, ಅದರ ಹಿನ್ನೆಲೆಯಲ್ಲಿ ನಿರ್ಣಯವಾಗಬೇಕು. ಮತ್ತೇನು ಇಲ್ಲ. ನಮ್ಮ ಸಭಾ ನಾಯಕರು ಏನು ಹೇಳಿದ್ದಾರೆ ಆ ವಿಷಯದಲ್ಲಿ ನಾವು ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ಇಂಥಾ ಒಂದು ಸಂಕಷ್ಟ ಪರಿಸ್ಥಿಯಲ್ಲಿ ಸರ್ಕಾರದ ಜೊತೆಯಲ್ಲಿ ಜನತೆಯ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾವು ಸಹಕಾರ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಈ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೂ ಮತ್ತು ಸರ್ಕಾರ ಮಾಡತಕ್ಕ ಪ್ರತಿಯೊಂದು ಕೆಲಸಕ್ಕೂ ನಾವು ವಿರೋಧ ಪಕ್ಷದವರು ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ಇವೊತ್ತು ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟ್ ಈ ಸಭೆಯಲ್ಲಿ ಇಡುವುದಕ್ಕೆ, ಓದುವುದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ. ಸ್ಟೇಟ್‌ಮೆಂಟ್ ಓದಿದ ಮೇಲೆ ನನ್ನ ಸಬ್‌ಸ್ಟಿಟ್ಯೂಟ್ ಮೋಷನ್ ಏನಿದೆ ಅದನ್ನು ಈ ಸಭೆಯವರು ಅಂಗೀಕಾರ ಮಾಡಿ ಬಹುಶಃ ನಾಳೆಯಿಂದ ಈ ಸಭೆಯಲ್ಲಿ ಬೇರೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಚರ್ಚೆ ಮಾಡುವುದಕ್ಕೆ ನಮ್ಮ ಮಾನ್ಯ ಮಿತ್ರರು ಅನುವು ಮಾಡಿಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿ ನನ್ನ ಎಲ್ಲಾ ಸ್ನೇಹಿತರೂ ದಯವಾಡಿ ಸರ್ಕಾರಕ್ಕೆ ಸಹಕರಿಸಿ ನಾವೆಲ್ಲರೂ ಈ ಸಭೆಯ ಕಾರ್ಯಕಲಾಪಗಳು ಮುಂದುವರೆಯುವುದಕ್ಕೆ ಅವಕಾಶವನ್ನು ಮಾಡಿ ಕೊಡೋಣ ಎಂದು ನಾನು ಪ್ರಾರ್ಥನೆ ಮಾಡಿ, ದಯವಾಡಿ ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಧರಣಿ ಸತ್ಯಾಗ್ರಹ ಮಾಡಿರುವವರೆಲ್ಲರೂ ದಯವಾಡಿ ತಮ್ಮ ತಮ್ಮ ಸೀಟುಗಳಿಗೆ ಹೋಗಿ ಕುಳಿತುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಧರಣಿ ಸತ್ಯಾಗ್ರಹ ಮಾಡಿದ್ದ ಎಲ್ಲಾ ಮಾನ್ಯ ಸದಸ್ಯರೂ ಎದ್ದು ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಂಡರು)

ಅಧ್ಯಕ್ಷರು.—ಮಾನ್ಯ ರೆವಿನ್ಯೂ ಮಂತ್ರಿಗಳು ಈಗ ತಮ್ಮ ಸ್ಟೇಟ್‌ಮೆಂಟ್ ಅನ್ನು ಮಾಡ ಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು). – ಸನ್ಮಾನ್ಯ ಅಧ್ಯಕ್ಷಣಿಯವರೇ ನಾನು ನನ್ನ ಹೇಳಿಕೆಯನ್ನು ಮಾಡಿದ್ದು ಸ್ವಲ್ಪ ದೂರ ಹೋಗಿದ್ದರೂ ಕೂಡ ಬದಲಾವಣೆಯಾದಂತಹ ಪರಿಸ್ಥಿತಿಯಲ್ಲಿ ಮತ್ತೆ ನಾನು ನನ್ನ ಹೇಳಿಕೆಯನ್ನು ಪ್ರಾರಂಭದಿಂದ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಮಾನ್ಯ ಅಧ್ಯಕ್ಷರೆ,

ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಕೈಕೊಂಡ ಪರಿಹಾರ ಕಾಮಗಾರಿಗಳ ಕುರಿತು ಈ ಸದನದಲ್ಲಿ ಹಿಂದಿನ ಅಧಿವೇಶನದ ಕೊನೆಗೆ ಆಗಸ್ಟ್ 18ನೆಯ ದಿನಾಂಕದಂದು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಭಾಷಣ ಮಾನ್ಯ ಸದಸ್ಯರ ನೆನಪಿನಲ್ಲಿರಬಹುದು. ನಮ್ಮಾರು ಮೂರು ತಿಂಗಳು ಕಳೆದ ಮೇಲೆ ನಾವೀಗ ಪುನಃ ಸಭೆ ಸೇರುತ್ತಿದ್ದೇವೆ. ಈ ಮಧ್ಯಕಾಲದಲ್ಲಿ ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಪರಿಸ್ಥಿತಿ ಗಮನಾರ್ಹವಾಗಿ ಉತ್ತಮಗೊಂಡಿದೆ. ಆದರೆ, ಉತ್ತರ ಹಾಗೂ ಈಶಾನ್ಯ ಭಾಗಗಳಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಇಂದು ಈ ಪ್ರದೇಶಗಳು ನಮ್ಮ ನೆನಪಿನಲ್ಲಿ ಇದುವರೆಗೂ ಇಲ್ಲದ ಭೀಕರ ಸ್ಥಿತಿಯನ್ನು ಎದುರಿಸಬೇಕಾಗಿದೆ.

ಹಿಂದಿನ 8 ವರ್ಷಗಳ ಪೈಕಿ 7 ವರ್ಷಗಳ ಕಾಲ ಮೈಸೂರು ರಾಜ್ಯದಲ್ಲಿ ಅಭಾವ ಪರಿಸ್ಥಿತಿಯಿತ್ತು. 1970-71ರಲ್ಲಿ ರಾಜ್ಯದ ಬಹುಭಾಗದಲ್ಲಿ ಅಭಾವ ಪರಿಸ್ಥಿತಿಯಿತ್ತು. ಇದರಿಂದಾಗಿ ಖರೀಫ್ ಬೆಳೆಗೆ ತೀವ್ರ ನಷ್ಟವಾಗಿತ್ತು. 1971-72ರಲ್ಲಿ 106 ತಾಲ್ಲೂಕುಗಳು ಅಭಾವ ಸ್ಥಿತಿಯಿಂದ ಪೀಡಿತವಾಗಿದ್ದವು. ಕೆಲವು ಪ್ರದೇಶಗಳಲ್ಲಿ ಖರೀಫ್ ಬೆಳೆ ಪೂರ್ತಿ ನಷ್ಟವಾಯಿತು. ಬೇರೆ ಕೆಲವು ಕಡೆ ಫಸಲು ತೀರ ಕಡಿಮೆಯಾಗಿತ್ತು. ಹಿಂಗಾರು ಮಳೆ ಕಡಿಮೆಯಾಗಿದ್ದ ಕಾರಣ ರಬಿ ಬೆಳೆ ಕೂಡ ಚೆನ್ನಾಗಿರಲಿಲ್ಲ. ಕೆಲವು ತಿಂಗಳ ಕಾಲ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಪರಿಹಾರ ರೂಪದಲ್ಲಿ ಉದ್ಯೋಗ ಒದಗಿಸಬೇಕಾಯಿತು. ಅಭಾವ ಸ್ಥಿತಿ ಪರಮಾವಧಿಗೆ ಮುಟ್ಟಿದಾಗ ಅಭಾವ ಕಾಮಗಾರಿಗಳಿಗೆ ನೇಮಿಸಿಕೊಂಡ ಜನರ ಒಟ್ಟು ಸಂಖ್ಯೆ ಒಂದು ಲಕ್ಷ. ಜೊತೆಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಇಲಾಖಾ ಕಾಮಗಾರಿಗಳಿಗಾಗಿ 1.4 ಲಕ್ಷ ಜನರನ್ನು ನೇಮಿಸಿಕೊಳ್ಳಲಾಗಿತ್ತು.

1971-72ರಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡಿದ ಕೇಂದ್ರ ಅಧ್ಯಯನ ತಂಡವು ಅಭಾವ ಪರಿಹಾರ ಕಾಮಗಾರಿಗೆ ಒಟ್ಟು 5.49 ಕೋಟಿ ರೂಪಾಯಿ ಹಣವನ್ನು ಗೊತ್ತುಪಡಿಸಿತ್ತು. ದಿನಾಂಕ 31ನೇ ಮಾರ್ಚಿ 1972ರ ವರೆಗೆ 5.13 ಕೋಟಿ ರೂಪಾಯಿ ವೆಚ್ಚವಾಗಿತ್ತು. 1971-72ರಲ್ಲಿ ಪ್ರಾರಂಭವಾದ ಕಾಮಗಾರಿಗಳಿಗಾಗಿ 1ನೇ ಏಪ್ರಿಲ್ 1972 ರಿಂದ 30ನೇ ಜೂಲೈ 1972ರ ವರೆಗಿನ ಅವಧಿಯಲ್ಲಿ ನಮ್ಮಾರು ಒಂದು ಕೋಟಿ ರೂಪಾಯಿ ವೆಚ್ಚ ಮಾಡಲಾಯಿತು.

ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಚೆನ್ನಾಗಿ ಮಳೆ ಬಿದ್ದ ಕಾರಣ ಎಲ್ಲ ಜಿಲ್ಲೆಗಳಲ್ಲೂ ಪ್ರಸ್ತುತ ಬೇಸಾಯ ಹಂಗಾಮು ಅಶಾದಾಕವಾಗಿ ಪ್ರಾರಂಭವಾಯಿತು. ಆದರೆ 1972ರ ಜುಲೈ ತಿಂಗಳ ಎರಡನೇ ವಾರದಿಂದ ಆಗಸ್ಟ್ ಕೊನೆಯವರೆಗೂ 16 ಜಿಲ್ಲೆಗಳಲ್ಲಿ ಆಪಚ್ಛನ್ನವಾಗಿ ಬರಗಾಲ ಮುಂದುವರಿಯಿತು. ಇದರಿಂದಾಗಿ ಉತ್ತರ ಭಾಗದ ಜಿಲ್ಲೆಗಳಲ್ಲಿ ಖರೀಫ್ ಜಮೀನಿನ ಬಹು ಭಾಗದಲ್ಲಿ ಬಿತ್ತನೆ ಕೆಲಸ ಪ್ರಾರಂಭವಾಗಲೇ ಇಲ್ಲ. ಬಿತ್ತನೆಯಾದ ಕಡೆ ಕೂಡ ಬೆಳೆಗಳು ಪೂರ್ತಿಯಾಗಿ ನಷ್ಟವಾಗಿದ್ದುವು. ಇಲ್ಲವೆ ಕುಂಠಿತವಾಗಿದ್ದು, ಬಂದ ಫಸಲೂ ಶೇ. 10ಕ್ಕೆ ಮೀರಿರಲಿಲ್ಲ. ರಾಜ್ಯದಲ್ಲಿರುವ 175 ತಾಲ್ಲೂಕುಗಳ ಪೈಕಿ, ಒಟ್ಟು 131 ತಾಲ್ಲೂಕುಗಳಲ್ಲಿ ಖರೀಫ್ ಬೆಳೆ ಪೂರ್ತಿಯಾಗಿ ಇಲ್ಲವೆ ಭಾಗಶಃ ಕೆಟ್ಟುಹೋಗಿತ್ತು, ಬರಗಾಲಕ್ಕೆ ಗುರಿಯಾದ ಪ್ರದೇಶಗಳಲ್ಲಿ ಇರುವ ಗ್ರಾಮಾಂತರ ಜನಸಂಖ್ಯೆ 1.04 ಕೋಟಿ. ಅಭಾವ ಪೀಡಿತ ಗ್ರಾಮಗಳ ಸಂಖ್ಯೆಯನ್ನೂ, ಜನಸಂಖ್ಯೆಯನ್ನೂ ಮತ್ತು ಪೀಡಿತ ಜಿಲ್ಲೆಗಳಲ್ಲಿ ಏಪ್ರಿಲ್ 1 ರಿಂದ ನವೆಂಬರ್ 15ರ ವರೆಗೆ ತಿಂಗಳು-ತಿಂಗಳು ಬಂದ ಮಳೆಯ ವಿವರಗಳನ್ನು ತೋರಿಸುವ ಶಟ್ಟೆಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ. ಅಲ್ಲದೆ, ವಾಡಿಕೆಯಾಗಿ ಖುಷ್ಕಿ ಜಮೀನಿನ ಖರೀಫ್ ಬಿತ್ತನೆಯಾಗುವ ವಿಸ್ತೀರ್ಣವನ್ನೂ, ವಾಸ್ತವವಾಗಿ ಬಿತ್ತನೆಯಾದ ಒಟ್ಟು ವಿಸ್ತೀರ್ಣವನ್ನೂ ಕೂಡ ತೋರಿಸುವ ತಖ್ತೆಯನ್ನೂ ಒದಗಿಸಿದೆ. ಬಿಜಾಪುರ ಜಿಲ್ಲೆಯಲ್ಲಿ ನಡೆದ ಬಿತ್ತನೆ ನಮ್ಮಾರು ಶೇ. 35ರಷ್ಟು, ಗುಲ್ಬರ್ಗದಲ್ಲಿ ಶೇ. 50ರಷ್ಟು, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶೇ. 50 ರಿಂದ ಶೇ. 60ರ ವರೆಗೆ ಬಿತ್ತನೆಯಾಗಿತ್ತು.

ಸೆಪ್ಟೆಂಬರ್ ತಿಂಗಳ ಪೂರ್ವಾರ್ಧದಲ್ಲಿ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ನಮ್ಮಾರು ಎಲ್ಲೆಲ್ಲೂ ಮಳೆ ಬಿದ್ದಿತ್ತು. ಇದರಿಂದ ಪರಿಸ್ಥಿತಿ ಗಮನಾರ್ಹವಾಗಿ ಉತ್ತಮಗೊಂಡಿತ್ತು. ಉತ್ತರ ಭಾಗದ ಜಿಲ್ಲೆಗಳಲ್ಲಾದರೋ ಮಳೆ ಬಂದದ್ದೇ ತಡವಾಗಿ. ಈ ಮಳೆ ಕೂಡ ಬೆಳೆದುನಿಂತ ಖರೀಫ್ ಬೆಳೆಯನ್ನು ರಕ್ಷಿಸುವುದಕ್ಕಾಗಲಿ ಜಮೀನುಗಳಲ್ಲಿ ಬೇರೆ ಬೆಳೆ ಬಿತ್ತುವುದಕ್ಕಾಗಲಿ ಸಾಕಷ್ಟಿರಲಿಲ್ಲ.

ಈ ಪೀಡಿತ ಪ್ರದೇಶಗಳಲ್ಲಿ ಪರಿಹಾರ ನೀಡುವುದಕ್ಕಾಗಿ ಕೈಕೊಂಡ ಕ್ರಮವನ್ನು ಈ ಮುಂದೆ ನಂತೆ ವಿವರಿಸಬಹುದು.

1. ಬರಗಾಲ ಪರಿಸ್ಥಿತಿಯಿಂದಾಗಿ ಕೆಲಸ ಕಳೆದುಕೊಂಡ ಜೀಸಾಯ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ ಪರಿಹಾರ ಕಾಮಗಾರಿಗಳ ಪ್ರಾರಂಭ :

2. ನೀರಿಗೆ ತೊಂದರೆಯಿರುವ ಕಡೆ ಕುಡಿಯುವ ನೀರು ಒದಗಿಸುವುದಕ್ಕೆ—

(1) ಈಗಿರುವ ಬಾವಿಗಳ ಆಳ ಹೆಚ್ಚಿಸಿ ;

(2) ತಾತ್ಕಾಲಿಕ ಬಾವಿ ತೋಡಿಸಿ ;

(3) ಬೇಸಿಗೆ ಕಾಲದಲ್ಲಿ ನವಾ ಕುಡಿಯುವ ನೀರಿನ ಅಭಾವವಿರುವ ಕಡೆ ಹೈಸ್ಪೀಡ್ ಡ್ರಿಲ್ಲಿಂಗ್ ರಿಗ್‌ಗಳಿಂದ ಕೊರೆ ಬಾವಿಗಳನ್ನು ತೋಡಿಸಿ ; ಮತ್ತು

(4) ಮೇಲೆ ಹೇಳಿದ ಮೂರು ರೀತಿಗಳಲ್ಲಿ ನೀರು ಒದಗಿಸುವುದು ಕಷ್ಟವಾಗಿರುವ ಗ್ರಾಮಗಳಿಗೆ ಟ್ಯಾಂಕರುಗಳ ಮೂಲಕ ನೀರು ಸಾಗಿಸಿ; ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ.

3. ಮೇವಿನ ಮಾರಾಟಕ್ಕೆ ಸಾಲಗಳ ಕೊಡುಗೆ ಮತ್ತು ಮೇವು ದೊರೆಯುವ ಕಡೆಯಿಂದ ಅದನ್ನು ಬಳಸುವ ಕಡೆಗೆ ಸಾಗಿಸುವ ಪೆಚ್ಚಿನ ನ್ನು ತುಂಬಿಕೊಳ್ಳಲು ಸಹಾಯಧನ ನೀಡಿಕೆ.

4. ಬೀಜ ಮತ್ತು ಗೊಬ್ಬರ ಕೊಳ್ಳಲು ಸಾಲಗಳ ನೀಡಿಕೆ.

5. ಆಹಾರ ಧಾನ್ಯಗಳನ್ನು, ಮುಖ್ಯವಾಗಿ ಗೋದಿಯನ್ನು ನ್ಯಾಯ ಬೆಲೆ ಅಂಗಡಿಗಳಲ್ಲಿ ಹಂಚುವುದು

6. ತೊಂದರೆಗೆ ಗುರಿಯಾಗುವ ಜನವರ್ಗಗಳಿಗೆ ಎಂದರೆ ಶಾಲಾ ಪೂರ್ವ ವಕ್ಕಳು: ನ್ಯನ್ಯಪಾನ ಮಾಡಿಸುವ ತಾಯಂದಿರು, ಗರ್ಭಿಣಿ ಸ್ತ್ರೀಯರು, ಮುಂತಾದವರಿಗೆ ಪೀಡಿತ ಪ್ರದೇಶಗಳಲ್ಲಿ ಆಹಾರ ಪೂರೈಕೆ ಯೋಜನೆಯನ್ನು ಮುಂದುವರಿಸುವುದು.

ಪೀಡಿತ ಪ್ರದೇಶಗಳಲ್ಲಿ ಉದ್ಯೋಗ ಒದಗಿಸುವುದಕ್ಕಾಗಿ ನಾನಾ ಇಲಾಖೆಗಳಲ್ಲಿ ಬಜೆಟ್ ವ್ಯವಸ್ಥೆಯಾಗಿರುವ ಕಾಮಗಾರಿಗಳೂ, ಇಲ್ಲವೆ ದುರ್ಬಿಕ್ಷಕ್ಕೆ ಗುರಿಯಾಗುವ ಪ್ರದೇಶ ಕಾರ್ಯಕ್ರಮ, ಗ್ರಾಮಾಂತರ ಉದ್ಯೋಗ ಕಲ್ಪನೆಗಾಗಿ ತೀವ್ರ ಕಾರ್ಯಕ್ರಮ ಮುಂತಾದ ವಿಶಿಷ್ಟ ಕಾರ್ಯಕ್ರಮಗಳ ಕಾಮಗಾರಿಗಳನ್ನು ಕೂಡ ಪೂರ್ಣ ಭರದಿಂದ ಪ್ರಾರಂಭಿಸತಕ್ಕುದೆಂದು ತಿಳಿವಳಿಕೆ ನೀಡಲಾಗಿದೆ. ಬಜೆಟ್ಟಿನಲ್ಲಿ ಮಂಜೂರು ಮಾಡಿದ್ದ ಕಾಮಗಾರಿಗಳು ಹಾಗೂ ವಿಶಿಷ್ಟ ಕಾರ್ಯಕ್ರಮಗಳು ಒದಗಿಸುವ ಉದ್ಯೋಗಾವಕಾಶಕ್ಕೆ ಪೂರಕವಾಗಿ ಪರಿಹಾರ ಕಾರ್ಯಗಳನ್ನು ಕೈಕೊಳ್ಳಲಾಗಿದೆ. ಅವಷ್ಟು ಮಟ್ಟಿಗೆ ಪರಿಹಾರ ಕಾಮಗಾರಿಗಳಲ್ಲಿ ಕೂಡ ಉತ್ಪಾದಕ ಹಾಗೂ ಅಭಿವೃದ್ಧಿ ಸ್ವಭಾವದ ಕಾಮಗಾರಿಗಳನ್ನು ಕೈಕೊಳ್ಳಲಾಗಿದೆ. ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳುವಾಗ ಮುಂದೆ ಹೆಳಲಿನ ಆದ್ಯತಾ ಕ್ರಮವನ್ನು ಸೂಚಿಸಿದೆ :

1. ಚಿಕ್ಕಪುಟ್ಟ ನೀರಾವರಿ ಕಾಮಗಾರಿಗಳು —ಪರ್ಕೋಲೇಷನ್ ಕೆರೆಗಳು ಮತ್ತು ಗೋಕಟ್ಟೆಗಳ ಸಮೇತ.

2. ಭೂಸಾರ ರಕ್ಷಣೆ.

3. ವನ ನಿರ್ಮಾಣ.

4. ಈ ಮೂರು ವರ್ಗಗಳ ಕಾಮಗಾರಿಗಳಿಂದ ಸಾಕಷ್ಟು ಉದ್ಯೋಗಾವಕಾಶ ದೊರೆಯದೆ ಹೋದಲ್ಲಿ ಸಂಪರ್ಕಸಾಧನಗಳು.

ಮೇಲ್ಕಂಡ ಪರಿಹಾರ ಕಾರ್ಯಕ್ರಮಕ್ಕೆ ಈ ಮುಂಚೆ ಸೂಚಿಸಿದಂತೆ ಒಟ್ಟು 16-50 ಕೋಟಿ ರೂಪಾಯಿ ವೆಚ್ಚವಾಗುವುದೆಂದು ರಾಜ್ಯ ಸರ್ಕಾರದವರು ಅಂದಾಜು ಮಾಡಿದ್ದರು.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

	ಕೋಟಿ ರೂಪಾಯಿಗಳಲ್ಲಿ
ಪರಿಹಾರ ಕಾಮಗಾರಿಗಳು	9-00
ತಕಾವಿ ಸಾಲಗಳು	3-00
10,000 ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯಕ್ರಮಕ್ಕೆ ತಗಲುವ ವೆಚ್ಚದ ಹೆಚ್ಚಿಕೆ ಸರ್ಕಾರದ ಪಾಲು	2-50
ಮೇವು ಮತ್ತು ಆಹಾರದ ಖರೀದಿಗೆ ಸಹಾಯಧನ	0-50
ಕುಡಿಯುವ ನೀರಿಗಾಗಿ ಕೊರೆ ಬಾವಿಗಳು	1-00
ಬಾವಿಗಳ ಆಳ ಹೆಚ್ಚಿಸುವುದು ಮತ್ತು ತಾತ್ಕಾಲಿಕ ಬಾವಿಗಳ ವ್ಯವಸ್ಥೆ ...	0-50
ಒಟ್ಟು ...	16-50

ಈಗಿನ ಪರಿಸ್ಥಿತಿಯ ನಿವಾರಣೆಗಾಗಿ ರಾಜ್ಯಸರ್ಕಾರಕ್ಕೆ 16½ ಕೋಟಿ ರೂಪಾಯಿಯಷ್ಟು ಕೇಂದ್ರ ಸಹಾಯ ನೀಡಬೇಕೆಂದು ಭಾರತ ಸರ್ಕಾರಕ್ಕೆ ಬರೆದುಕೊಳ್ಳಲಾಗಿತ್ತು.

ಪೀಡಿತ ಪ್ರದೇಶಗಳಲ್ಲಿ ಉದ್ಯೋಗ ಒದಗಿಸುವುದಕ್ಕಾಗಿಯೂ ನೀರಾವರಿ ಸೌಕರ್ಯ ಕಲ್ಪಿಸುವುದಕ್ಕಾಗಿಯೂ ಮಲಪ್ರಭಾ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳಲ್ಲಿ ಕಾಲುವೆಗಳ ನಿರ್ಮಾಣ ಕಾರ್ಯಗಳನ್ನು ಕೈಗೆಗೊಳ್ಳುವ ಬಗ್ಗೆ ಮತ್ತು ಅಷ್ಟೇ ಅಲ್ಲದೆ ಪತದ ನೀರಾವರಿ ಹಾಗೂ ಬೇಸಗೆ ತಿಂಗಳುಗಳಲ್ಲಿ ಕುಡಿಯುವ ನೀರಿನ ಸರಬರಾಜಿಗಾಗಿ ನೀರು ಸಂಗ್ರಹಿಸಲು ಸೂಕ್ತ ಸ್ಥಳಗಳಲ್ಲಿ ಕೃಷ್ಣಾ ನದಿಗೆ ಮಧ್ಯಮ ಪ್ರಮಾಣ ಕಟ್ಟೆಗಳನ್ನು ಕಟ್ಟಿಸುವ ಬಗ್ಗೆ 9 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಲಾಗಿತ್ತು. ಕೇಂದ್ರ ಸರ್ಕಾರದಿಂದ ನೇಮಕವಾದ ಅಧ್ಯಯನ ತಂಡವು 1972ನೇ ಸೆಪ್ಟೆಂಬರಿನಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಸಂಚಾರಮಾಡಿದ ನಂತರ ಶಿಫಾರಸು ಮಾಡಿದಂತೆ, ಕೇಂದ್ರ ಸರ್ಕಾರದವರು ಅಭಾವ ಪರಿಸ್ಥಿತಿಯ ನಿವಾರಣೆಗಾಗಿ ಈ ರಾದಲ್ಲಿ ಒಟ್ಟು 7.75 ಕೋಟಿ ರೂಪಾಯಿ ಪರಮಾವಧಿ ಹಣವನ್ನು ಮೊತ್ತ ಪಡಿಸಿದರು. ಈ 7 75 ಕೋಟಿ ರೂಪಾಯಿ ಮೊತ್ತದ ವಿವರವನ್ನು ಮುಂದೆ ಕೊಟ್ಟಿದೆ:

	ರೂ. ಲಕ್ಷ
ಪರಿಹಾರ ಕಾಮಗಾರಿಗಳು	625
ಕುಡಿಯುವ ನೀರು	25
ಮೇವು ಮತ್ತು ಆಹಾರದ ಖರೀದಿಗೆ ಸಹಾಯ ಧನ ...	25
ಒಟ್ಟು ಪರಿಹಾರ ಕಾರ್ಯದ ಬಾಬುಗಳು	675
ತಕಾವಿ ಸಾಲಗಳು	100
ಒಟ್ಟು ಜುಮ್ಲಾ ...	775

ಈ ಪರಮಾವಧಿ ಮೊತ್ತವನ್ನು 1972ನೇ ಇಸವಿ ಡಿಸೆಂಬರ್ ಅಂತ್ಯದೊಳಗಾಗಿ ವಹಿಸತಕ್ಕ ವೆಚ್ಚದ ಬಗ್ಗೆ ಗೊತ್ತುಪಡಿಸಲಾಗಿದೆ. ಜಿಲ್ಲೆಗಳಲ್ಲಿ ಅಭಾವ ಪರಿಹಾರಕ್ಕಾಗಿ ಈಗಾಗಲೇ 11.58 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. 1972ನೇ ಇಸವಿ ನವೆಂಬರ್ 20ನೇ ದಿನಾಂಕದವರೆಗೆ ಪ್ರತಿಯೊಂದು ಜಿಲ್ಲೆಗೆ ಹಂಚಿಕೆಯಾದ ಮೊತ್ತವನ್ನು ತೋರಿಸುವ ತಖ್ತೆಯೊಂದನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುತ್ತದೆ. ಈಗ ಬಿಡುಗಡೆಮಾಡಿದ ಪೂರ್ತಿ ಮೊಬಲಗಿಕ್ಕೊತ್ತರ್ ತಿಂಗಳ ಕೊನೆಯೊಳಗಾಗಿ ವೆಚ್ಚವಾಗುತ್ತಿತ್ತೆಂಬುದನ್ನು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಉದ್ಯೋಗ ಪಡೆದವರ ಅಂಕೆಗಳು ಸೂಚಿಸುತ್ತವೆ. ರಾಜ್ಯದ ಉತ್ತರ ಮತ್ತು ಈಶಾನ್ಯ

ಭಾಗಗಳು ದುರ್ಭಿಕ್ಷ ಸ್ಥಿತಿಯಿಂದ ಅತ್ಯಂತ ಪೀಡಿತವಾದ ಭಾಗಗಳು. ಅಲ್ಲ ಪರಿಹಾರ ಕಾರ್ಯ ಕ್ರಮವನ್ನು ಮುಂದುವರಿಸಿಕೊಂಡು ಇನ್ನಷ್ಟು ತೀವ್ರವಾಗಿ ನಡೆಸುವುದಕ್ಕಾಗಿ ಇನ್ನಷ್ಟು ಕೇಂದ್ರ ಸಹಾಯವನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರದವರಿಗೆ ಪತ್ರ ಬರೆಯ ರಾಗಿದೆ.

ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ 1972ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಮತ್ತು ಅಕ್ಟೋಬರ್ ತಿಂಗಳ ಪೂರ್ವಾರ್ಧದಲ್ಲಿ ಚೆನ್ನಾಗಿ ಮಳೆ ಬಿದ್ದಿತ್ತು. ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಾದರೋ ಅಷ್ಟು ಚೆನ್ನಾಗಿ ಬಿದ್ದಿರಲಿಲ್ಲ. ಉತ್ತರ ಮತ್ತು ಈಶಾನ್ಯ ಪ್ರದೇಶಗಳಲ್ಲಿ ಮಳೆ ಬಿದ್ದೇ ಇರಲಿಲ್ಲವೆಂದರೂ ತಪ್ಪಲ್ಲ. ಕೆಲವು ತಾಲ್ಲೂಕುಗಳಲ್ಲೇನೋ ಕೊಂಚ ಮಳೆಯಾಗಿತ್ತು. ಆದರೆ ರಬಿ ಬಿತ್ತನೆಗೆ ಅದು ಸಾಲದಾಯಿತು. ದಕ್ಷಿಣ ಮತ್ತು ಪಶ್ಚಿಮ ಭಾಗ ಗಳಿಗೆ ಸೆಪ್ಟೆಂಬರ್‌ನಲ್ಲೂ, ಅಕ್ಟೋಬರ್ ಪೂರ್ವಾರ್ಧದಲ್ಲೂ ಬಿದ್ದ ಮಳೆ ಅಲ್ಲಿಯ ಪರಿಸ್ಥಿತಿಯನ್ನು ಕೊಂಚ ಸುಧಾರಿಸಿತು. ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಾದರೋ, ಹಿಂಗಾರಿ ಮಳೆ ಬೀಳದಿದ್ದ ಕಾರಣ ಮುಂಗಾರಿ ಮಳೆ ಇಲ್ಲದೆ ಆ ಮೊದಲೇ ಹದಗೆಟ್ಟಿದ್ದ ಪರಿಸ್ಥಿತಿ, ಇನ್ನಷ್ಟು ಬಿಗಡಾಯಿಸಿತು. ಕೆಲವು ತಾಲ್ಲೂಕುಗಳಲ್ಲಿಂತೂ ಜೂನ್ ತಿಂಗಳಿಂದ ಅಕ್ಟೋಬರ್ ಕೊನೆಯವರೆಗೆ ಬಿದ್ದ ಮಳೆ ವಾಡಿಕೆ ಮಳೆಯ ಸುಮಾರು ಶೇಕಡಾ 25 ಮಾತ್ರ.

ಈ ಪ್ರದೇಶಗಳಲ್ಲಿ ಖರೀಫ್ ಬೆಳೆ ಪೂರ್ತಿ ನಷ್ಟವಾಗಿದೆ, ಈಗ ರಬಿ ಬೆಳೆ ಕೂಡ ಪೂರ್ತಿ ನಷ್ಟ ವಾಗುವಂತಿದೆ. ಇದೂ ಅಲ್ಲದೆ ಕಳೆದ ವರ್ಷ ಬಿದ್ದ ಮಳೆಯೇ ಕಡಿಮೆ: ಈ ವರ್ಷ ಬಿದ್ದ ಮಳೆಯೂ ಕಡಿಮೆಯಾದ ಕಾರಣ ಬಾವಿಗಳಲ್ಲಿ ನೀರಿನ ಮಟ್ಟ ಕೆಳಕ್ಕಿಳಿದಿದೆ. ಉತ್ತರ ಮತ್ತು ಈಶಾನ್ಯ ಪ್ರದೇಶಗಳ ಹಲವಾರು ಗ್ರಾಮಗಳಲ್ಲಿ ನೀರಿಗೆ ತೊಂದರೆಯಾಗಿದೆ. ಮೇವಿಗೆ ಹಸಿರು ಹುಲ್ಲು ಎಲ್ಲೂ ಕಾಣದಾಗಿದೆ. ಸಾಮಾನ್ಯವಾಗಿ ಈ ಕಾಲಕ್ಕೆ ಮೇವು ಒದಗಿಸಬಹುದಾಗಿದ್ದ ಖರೀಫ್ ಬೆಳೆ ತುಂಬಾ ನಷ್ಟವಾಗಿದೆ. ಆದ್ದರಿಂದ ಇಲ್ಲಿ ಮೇವಿಗೂ ತೊಂದರೆಯಾಗಿದೆ. ಕಳೆದ ವರ್ಷ ಉಳಿಸಿ ಕೊಂಡ ಮೇವಿನ ದಾಸ್ತಾನು ಕೂಡ ಮುಗಿದುಹೋಗಿದೆ.

ಗುಲ್ಬರ್ಗ, ಬಿಜಾಪುರ ಮತ್ತು ಬೀದರ್ ಜಿಲ್ಲೆಗಳ ಸಮಗ್ರ ಭಾಗವು ಬೆಳಗಾಂವಿ ಜಿಲ್ಲೆಯ ಪೂರ್ವ ತಾಲ್ಲೂಕುಗಳು ಮತ್ತು ರಾಯಚೂರು ಜಿಲ್ಲೆಯ ಹೈಕಿ ತುಂಗಭದ್ರಾ ಆಯಕಟ್ಟು ಪ್ರದೇ ಶದ ಹೊರಗಿನ ತಾಲ್ಲೂಕುಗಳಂತೂ ಅತ್ಯಂತ ಪೀಡಿತ ಪ್ರದೇಶಗಳು. ಅಲ್ಲ ಖರೀಫ್, ರಬಿ ಇವೆ ರಡೂ ಬೆಳೆಗಳೂ ನಷ್ಟವಾಗಿವೆ. ಮಂತ್ರಿಮಂಡಲವು ಅಕ್ಟೋಬರ್ ತಿಂಗಳ ಕೊನೆಯಲ್ಲಿ ಪರಿಸ್ಥಿತಿ ಯನ್ನು ಸವಿವರವಾಗಿ ಪರಿಶೀಲಿಸಿತು. ಆ ತರುವಾಯ ಬಿಜಾಪುರ, ಗುಲ್ಬರ್ಗ, ಬೀದರ್ ಜಿಲ್ಲೆಗಳ ಲ್ಲಿಯೂ ಬೆಳಗಾಂವಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿಯೂ ಬರಗಾಲ ನಿವಾರಣೆಗಾಗಿ ಕೈಕೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ 28ನೇ ಅಕ್ಟೋಬರ್ 1972ನೇ ದಿನಾಂಕ ದಂದು ಈ ಮುಂದಿನಂತೆ ಸೂಚನೆ ನೀಡಲಾಯಿತು :

(1) ಪೀಡಿತ ಪ್ರದೇಶಗಳಲ್ಲಿ ತಿಂಗಳಿಗೆ ತಲಾ ಒಬ್ಬರಿಗೆ 8 ಕೆ.ಜಿ. ಯಂತೆ ಆಹಾರ ಧಾನ್ಯ ಕೊಡಬೇಕು. ಈ ಆಧಾರದ ಮೇರೆ ಪೀಡಿತ ಪ್ರದೇಶಗಳಲ್ಲಿ ತಿಂಗಳಿಗೆ 30,000 ಟನ್ ಗೋಧಿ ಬೇಕಾಗುವುದು. ಬೇರೆ ಪ್ರದೇಶಗಳಿಗೆ ಒದಗಿಸುವುದಕ್ಕಾಗಿ 20,000 ಟನ್ ಗೋಧಿ ಬೇಕಾಗು ವುದು. ಆದ್ದರಿಂದ ಮುಂದಿನ ಜೂನ್‌ವರೆಗೆ ತಿಂಗಳೊಂದಕ್ಕೆ 50,000 ಟನ್ ಗೋಧಿ ಪಂಚಿಕೆ ಯನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ ಭಾರತ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳ ಲಾಗಿದೆ. ಈಗ ಇರುವ ಹಂಚಿಕೆ ವ್ಯವಸ್ಥೆಯನ್ನು ಪರೀಕ್ಷಿಸಿ, ಅಗತ್ಯವಿರುವ ಪ್ರತಿಯೊಬ್ಬರಿಗೂ ಆಹಾರ ಧಾನ್ಯ ದೊರೆಯುವಂತೆ ಸರ್ವ ಪ್ರಯತ್ನ ಮಾಡಬೇಕು. ರಾಜ್ಯದ ಹೊರಗಡೆ ಗೋಧಿಯ ಕಳ್ಳಸಾಗಣೆಯಾಗದಂತೆ ನೋಡಿಕೊಳ್ಳಬೇಕು. 500 ಜನಕ್ಕಿಂತ ಹೆಚ್ಚು ನೌಕರರಿರುವ ಕಾಮಗಾರಿ ಸ್ಥಳಗಳಲ್ಲಿ ಒಂದು ದಿಪ್ಪೋ ತೆರೆದು ಮಜೂರಿ ಬಟವಾಡೆ ದಿನ ಆಹಾರ ಹಂಚಲು ಅನುಕೂಲವಾಗು ವಂತೆ ಆಹಾರ ಮತ್ತು ನಿತ್ಯೋಪಯೋಗಿ ಸಾಮಾಗ್ರಿ ಇಲಾಖೆಯವರು ಏರ್ಪಾಡು ಮಾಡಬೇಕು.

(2) ಈಗ ಸರ್ಕಾರದವರು ಎದುರಿಸುತ್ತಿರುವ ಅತ್ಯಂತ ಕಠಿಣ ಸಮಸ್ಯೆಯೆಂದರೆ ಮೇವಿನ ಸಮಸ್ಯೆ. ರಾಜ್ಯದಲ್ಲಿ ದೊರೆಯುವ ಮೇವಿನ ಮೂಲವನ್ನೆಲ್ಲ ಎಂದರೆ ಕಾಡುಗಳಲ್ಲಿ ದೊರೆಯುವ ಹುಲ್ಲು ಭತ್ತದ ಹೆಚ್ಚುವರಿ ಒಣ ಹುಲ್ಲು, ಮೆಕ್ಕೆ ಜೊಳದ ಹೆಚ್ಚುವರಿ ದಂಟು ಮೇವನ್ನೆಲ್ಲ ಒಟ್ಟು ಗೂಡಿಸಿ ಪೀಡಿತ ಪ್ರದೇಶಗಳಿಗೆ ಒದಗಿಸಬೇಕು. ಪೀಡಿತ ಜಿಲ್ಲೆಗಳಲ್ಲಿರುವ ಕಾಡುಗಳಲ್ಲಿ ಜಾನು ವಾರುಗಳು ಮೇಯುವುದಕ್ಕೆ ಅವಕಾಶ ಕೊಡಬೇಕು. ಮಲೆನಾಡು ಮತ್ತು ನಂಜರಾಯ ಕಾಡು ಗಳಲ್ಲಿ ದೊರೆಯುವ ಹುಲ್ಲನ್ನೆಲ್ಲ ಕೊಯ್ದು ಪೀಡಿತ ಪ್ರದೇಶಗಳಿಗೆ ಸಾಗಿಸಬೇಕು. ಬತ್ತದ ಹೆಚ್ಚು ವರಿ ಒಣ ಹುಲ್ಲನ್ನೆಲ್ಲ ಹಾಗೂ ಮೆಕ್ಕೆಜೋಳದ ಹೆಚ್ಚುವರಿ ದಂಟುಗಳನ್ನೆಲ್ಲ ಖರೀದಿ ಮಾಡಿ ಪೀಡಿತ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಪ್ರದೇಶಗಳಿಗೆ ಸಾಗಿಸುವ ಯತ್ನ ನಡೆಯಬೇಕು. ಸಿದ್ಧವಿರುವ ಮೇವನ್ನು ಪಡೆದುಕೊಳ್ಳುವಂತೆ ಮಧ್ಯ ಪ್ರದೇಶಕ್ಕೆ ನಿಯೋಜಿಸಿದ ಅಧಿಕಾರಿಗಳವರಿಗೆ ಹೇಳಬೇಕು. ವಿಶೇಷವಾ ರೈಲುಗಳನ್ನು ನಡೆಸಿ ಆ ಮೇವನ್ನು ರಿಯಾಯಿತಿ ದರದಲ್ಲಿ ಸಾಗಿಸುವಂತೆ ರೈಲ್ವೆ ಅಧಿಕಾರಿಗಳನ್ನು ಏನಂತಿಸಿ ಕೊಳ್ಳಬೇಕು. ಜಾನುವಾರುಗಳಿಗೆ ಒದಗಿಸುವುದಕ್ಕಾಗಿ ಉತ್ತರದೇಶದ ರಾಜ್ಯಗಳಿಂದ ಹೊಟ್ಟು ತೆಗೆದ ಬಾರ್ಲಿಯನ್ನು ಪಡೆದುಕೊಳ್ಳುವ ಶಕ್ಯತೆಯನ್ನು ಪರಿಶೀಲಿಸಬಹುದು.

(3) ಅಲ್ಲದೆ, ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿರುವ ಅರಣ್ಯಗಳಿಗೆ ಜಾನುವಾರುಗಳನ್ನು ಸಾಗಿಸುವಂತೆ ಪೀಡಿತ ಪ್ರದೇಶಗಳ ಜನರಿಗೆ ಸಲಹೆ ಮಾಡಬೇಕು. ದಾರಿಯಲ್ಲಿ 15 ಮೈಲಿಗಳ ಅಂತರದಲ್ಲಿ ಜಾನುವಾರುಗಳ ಶಿಬಿರಗಳನ್ನು ಸ್ಥಾಪಿಸಬೇಕು. ಈ ಶಿಬಿರದಲ್ಲಿ ಪಶುವೈದ್ಯ ಚಿಕಿತ್ಸಕರನ್ನು (ವೆಟರಿನರಿ ಡಾಕ್ಟರು) ನೇಮಿಸಬೇಕು. ಅಗತ್ಯವಿರುವ ಔಷಧಗಳನ್ನು, ಮೇವು ಮತ್ತು ನೀರಿನ ದಾಸ್ತಾನುಗಳನ್ನು ಒದಗಿಸಬೇಕು. ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪಡೆದುಕೊಳ್ಳತಕ್ಕ ಭತ್ತದ ಒಣ ಹುಲ್ಲನ್ನು ಬೆಳಗಾಂವಿ ಜಿಲ್ಲೆಯಲ್ಲಿ ಪಡೆದುಕೊಳ್ಳತಕ್ಕ ಮೆಕ್ಕೆ ಜೋಳದ ದಂಟುಗಳನ್ನು ಈ ಶಿಬಿರಗಳಿಗೆ ಸಾಗಿಸಬೇಕು.

(4) ನೀರು ಸರಬರಾಜು.—ಈ ವರ್ಷ ಯಾವ ಜಿಲ್ಲೆಗಳಲ್ಲಿ ನೀರಿನ ಕೊರತೆ ಸಂಭವಿಸುವ ಭಯವಿದೆಯೋ ಅವೆಲ್ಲ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವ ಕೆಲಸಕ್ಕೆ ಎಲ್ಲ ನೈ ಸ್ವೀಡ್ ಡ್ರಿಲ್ಲಿಂಗ್ ರಿಗ್ಗುಗಳನ್ನು ಪೀಡಿತ ಪ್ರದೇಶಗಳಿಗೆ ಸಾಗಿಸಬೇಕು. ಬಾವಿ ತೋಡಿಸುವುದು ಸಾಧ್ಯವಿಲ್ಲದ ಗ್ರಾಮಗಳಲ್ಲಿ ಟ್ಯಾಂಕರುಗಳ ಮೂಲಕವಾಗಲಿ ಅಥವಾ ಬಂಡಿಗಳ ಮೂಲಕವಾಗಲಿ ನೀರು ಸರಬರಾಜು ಮಾಡಲು ಏರ್ಪಾಡು ಮಾಡಬೇಕು. ಈ ವಿಚಾರದಲ್ಲಿ ಅಗತ್ಯ ಕ್ರಮವನ್ನು ಕೂಡಲೇ ಕೈಕೊಳ್ಳುವಂತೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ತಿಳಿಸಲಾಗಿದೆ.

(5) ಉದ್ಯೋಗ.—ಪೀಡಿತ ಪ್ರದೇಶಗಳಲ್ಲಿ ಭೂಸಾರ ಸಂರಕ್ಷಣೆ ಕಾಮಗಾರಿಗಳನ್ನು ಕೈಕೊಳ್ಳಲು ಸರ್ವಪ್ರಯತ್ನ ನಡೆಯಬೇಕು. ದೊರೆಯುವ ಸಿಬ್ಬಂದಿಯನ್ನೆಲ್ಲ ಈ ಜಿಲ್ಲೆಗಳಿಗೆ ಕಳುಹಿಸಬೇಕು. ಈಗ ತಾನೆ ತರಬೇತಿ ಪೂರೈಸಿರುವ ಎಲ್ಲ ಅಧಿಕಾರಿಗಳ ಸೇವೆಗಳನ್ನು ಬಿಜಾಪುರ, ಗುಲಬರ್ಗ ಮತ್ತು ಬೀದರ ಜಿಲ್ಲೆಗಳಲ್ಲಿ ಬಳಸಿಕೊಳ್ಳಬೇಕು. ಅಗತ್ಯವಿರುವ ಹೆಚ್ಚಿಗೆ ಹುದ್ದೆಗಳನ್ನು ವ್ಯವಸಾಯ ಇಲಾಖೆಯು ಮಂಜೂರು ಮಾಡಬೇಕು. ನಕ್ಷೆ ಇತ್ಯಾದಿಗಳ ತಯಾರಿಕೆಗೆ ಬೇಕಾಗುವ ಇಂಜನಿಯರಿಂಗ್ ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆ ಎರವಲು ನೀಡಬೇಕು. ಭೂ ಅಭಿವೃದ್ಧಿ ಬ್ಯಾಂಕುಗಳು ಕೊಟ್ಟ ಸಾಲದಿಂದ ನೀರಾವರಿ ಬಾವಿಗಳನ್ನು ತೋಡಿಸುವ ಗತಿ ತೀರ ನಿಧಾನವಾಗಿದೆ. ಭೂ ಅಭಿವೃದ್ಧಿ ಬ್ಯಾಂಕುಗಳು ಸಾಲ ನೀಡಿಕೆಗೆ ಅನುಸರಿಸುವ ಕಾರ್ಯವಿಧಾನವನ್ನು ತ್ವರಿತಗೊಳಿಸಬೇಕು. ಈಗ ರೈತರಿಗೆ ಕೊಡುವ ನಗದು ಸಾಲಗಳನ್ನು ಬಾವಿ ತೋಡಿಕೆಗೆ ಬಳಸಿಕೊಳ್ಳುವುದು ಅಸಂಭವ. ಅದುದರಿಂದ ಲೋಕೋಪಯೋಗಿ ಇಲಾಖೆಯು ಅಥವಾ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರ ಮೂಲಕ ಬಾವಿಗಳನ್ನು ತೋಡಿಸುವ ಶಕ್ಯತೆಯನ್ನು ಪರಿಶೀಲಿಸಬಹುದು. ಹಣ ಮಂಜೂರು ಆದೊಡನೆ ಈ ಸಂಸ್ಥೆಗೆ ಹಣವನ್ನು ವರ್ಗಾಯಿಸಲಾಗುವುದು. ಪೀಡಿತ ಗ್ರಾಮಗಳ ಪೈಕಿ ಪ್ರತಿಯೊಂದರಲ್ಲಿ ಗೊತ್ತುಪಡಿಸಿದ ಸ್ಥಳಗಳಲ್ಲಿ ಸುಮಾರು 10 ಬಾವಿ ತೋಡಿಸುವ ಗುರಿಯಿಟ್ಟುಕೊಳ್ಳಬೇಕು. ಈ ಬಾವಿಗಳ ನಿರ್ಮಾಣ ಕೆಲಸವನ್ನು ಶೀಘ್ರವಾಗಿ ಪೂರೈಸಬೇಕು. ಇದರ ವೆಚ್ಚವನ್ನು ಮಾಡಲು ಸರ್ಕಾರವು ವಹಿಸಿಕೊಂಡು ಅಮೇಲೆ ಅದನ್ನು ಸಾಲವಾಗಿ ಪರಿವರ್ತಿಸಬೇಕು.

(6) ಅಭಾವ ಪ್ರದೇಶಗಳಲ್ಲಿ ವನನಿರ್ಮಾಣ ಕಾರ್ಯವನ್ನು ಹೆಚ್ಚಿಸಬೇಕು. ಉದ್ಯೋಗ ಬಯಸುವವರ ಸೇವೆಗಳನ್ನು ಕಂದಕಗಳನ್ನು ತೋಡಿಸುವ ಕಾರ್ಯದಲ್ಲಿ ಅದಷ್ಟು ಮಟ್ಟಿಗೆ ಬಳಸಿಕೊಳ್ಳಬೇಕು.

(7) ಬೀದರ ಜಿಲ್ಲೆಗೆ ಎಸ್. ಎಫ್. ಡಿ. ಎ. ಯೋಜನೆಯಲ್ಲಿ ಒದಗಿಸಿರುವ 5 ಸಾವಿರ ನೀರಾವರಿ ಬಾವಿಗಳನ್ನೆಲ್ಲ ಕೈಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಿ ಸಾಧ್ಯವಾದಷ್ಟು ಬಾವಿಗಳ ನಿರ್ಮಾಣ ಕಾರ್ಯವನ್ನು ಕೈಕೊಳ್ಳಬೇಕು. ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ಲೋಕೋಪಯೋಗಿ ಇಲಾಖೆಯು ಈ ಪ್ರದೇಶಗಳಲ್ಲಿ ಬಳಸಿಕೊಂಡು ಕಾಮಗಾರಿಗಳನ್ನು ಪೂರೈಸಬೇಕು. ಪ್ರಧಾನ ರಸ್ತೆಗಳಿಗೆ (ಬಮರ್)ಗಳನ್ನು ರಚಿಸುವ ಕೆಲಸವನ್ನು ಮುಂದುವರಿಸಬೇಕು; ಇದರಿಂದ ಜನರಿಗೆ ಉದ್ಯೋಗ ಒದಗಿಸಿದಂತಾಗುತ್ತದೆ. ಅಂಥ ಪೀಡಿತ ಜಿಲ್ಲೆಗಳಲ್ಲಿ ಯಾವ ಕೆರೆಗಳಿಗೆ ಬಜೆಟ್ಟಿನಲ್ಲಿ ಹಣ ವ್ಯವಸ್ಥೆ ಮಾಡಿದೆಯೋ ಆ ಎಲ್ಲ ಕೆರೆಗಳ ನಿರ್ಮಾಣ ಕಾರ್ಯವನ್ನು, ಹಣ ವ್ಯವಸ್ಥೆ

ಯಾಗಿಲ್ಲದಿದ್ದರೂ ಪ್ಲಾನುಗಳು ಅಂದಾಜುಗಳು ಯಾವ ಕಾಮಗಾರಿಗಳ ಬಗ್ಗೆ ಸಿದ್ಧಪಡಿಸಲಾಗಿದೆಯೋ ಅವುಗಳನ್ನು ಕೂಡ ಸೂಕ್ತ ಅಧಿಕಾರಿಯಿಂದ ಮಂಜೂರಾತಿ ಪಡೆದುಕೊಂಡ ಮೇಲೆ ಪ್ರಾರಂಭಿಸಿ ಉದ್ಯೋಗ ಒದಗಿಸಬೇಕೆಂದು ಲೋಕೋಪಯೋಗಿ ಇಲಾಖೆಗೆ ಆದೇಶ ನೀಡಬೇಕು. ಕಾಲುವೆ ಅಗೆತವನ್ನು ಕೈಕೊಂಡು ಉದ್ಯೋಗ ಒದಗಿಸಲು ಅನುಕೂಲವಾಗುವಂತೆ, ಭೂ ಸಂಪಾದನ ಶಾಸನದ 17ನೇ ಪ್ರಕರಣದ ಮೇರೆಗೆ ಕಾರಂಜಿ ಯೋಜನೆಯಲ್ಲಿ ಕಾಲುವೆಗಳಿಗೆ ಬೇಕಾಗುವ ಜಮೀನನ್ನು ಸ್ವಾಧೀನ ವಹಿಸಿಕೊಳ್ಳಬಹುದು. ಭೀಮಾ ನದಿಯ ತೀರದಲ್ಲಿ ಯಾವ ಏತ ನೀರಾವರಿ ಯೋಜನೆಗಳನ್ನು ಪರಿಶೀಲಿಸಿ ಅಂದಾಜುಗಳನ್ನು ತಯಾರಿಸಲಾಗಿದೆಯೋ ಅಂಥ ಬೇರೆಬೇರೆ ನೀರಾವರಿ ಕಾಮಗಾರಿಗಳಿಗೆ ಮಂಜೂರಾತಿ ಕೊಟ್ಟು ಜಾಗ್ರತೆಯಾಗಿ ಪೂರೈಸಬೇಕು. ಅಥಣಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಹಾಕುವ ಕಟ್ಟೆಯಿಂದ ಬೇಸಿಗೆಯಲ್ಲಿ ಕುಡಿಯುವ ನೀರು ದೊರೆಯುವ ಕಾರಣ ಈ ಕೆಲಸವನ್ನು ಕೂಡಲೇ ಕೈಕೊಳ್ಳಬೇಕು. ಕೃಷ್ಣಾ ಮತ್ತು ಬೇರೆ ನದಿಗಳಿಗೆ ಸೂಕ್ತ ಸ್ಥಳಗಳಲ್ಲಿ ಕಟ್ಟೆಗಳನ್ನು ಕಟ್ಟಿಸಬೇಕು. ಭಾರಿ ನೀರಾವರಿ ಯೋಜನೆಗಳ ಎಂದರೆ, ಕೃಷ್ಣಾ ನದಿಯ, ನಾರಾಯಣಪುರ ಯೋಜನೆ ಮತ್ತು ಮಲಪ್ರಭ ಜಲಾಶಯ–ಈ ಯೋಜನೆಗಳಿಗೆ ಕಾಲುವೆಗಳನ್ನು ತೋಡಿಸುವ ಕೆಲಸಕ್ಕೆ ಹಣ ಬಿಡುಗಡೆ ಮಾಡುವಂತೆ ಲೋಕೋಪಯೋಗಿ ಇಲಾಖೆ ಕೂಡಲೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು. ಪೀಡಿತ ಪ್ರದೇಶಗಳಲ್ಲಿರುವ ಜನರು ಕೆಲಸದ ಸ್ಥಳಕ್ಕೆ ಹೋಗಲು ಉಚಿತ ಸಾಗಣಿ ವ್ಯವಸ್ಥೆ ಮಾಡಬೇಕು. ಕೆಲಸದ ಸ್ಥಳದಲ್ಲಿ ಅವರಿಗೆ ತಾತ್ಕಾಲಿಕ ಮನೆ ಕಟ್ಟಿಸಿ ಕೊಡಬೇಕು.

(8) ಪ್ರತಿಯೊಂದು ಗ್ರಾಮಕ್ಕೂ ಸಂಬಂಧಪಟ್ಟಂತೆ ವೃದ್ಧ ಹಾಗೂ ದುರ್ಬಲ ವ್ಯಕ್ತಿಗಳ ಪಟ್ಟಿಯೊಂದನ್ನು ತಯಾರಿಸಿ ಅವರಿಗೆ ಆಹಾರ ಧಾನ್ಯಗಳನ್ನು ಮುಖ್ಯವಾಗಿ ಹಿಟ್ಟು ಮತ್ತು, ರವೆಯನ್ನು ತಹಸೀಲ್ದಾರರು ಕೊಡತಕ್ಕ ಗುರುತು, ಕಾರ್ಡುಗಳ ಆಧಾರದ ಮೇಲೆ ಒದಗಿಸಲು ಅವಕಾಶ ಮಾಡಬೇಕು. ಈ ಆಹಾರ ಸರಬರಾಜನ್ನು ಉಚಿತವಾಗಿ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ''64 ಕ್ಷಾಮ'' ಎಂಬ ಶೀರ್ಷಿಕೆಗೆ ಖರ್ಚು ಹಾಕಬೇಕು.

(9) ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೀರಾ ಕಷ್ಟವಾಗಿದೆ. ಕಾಲ ಕಳೆದಂತೆಲ್ಲ ಈ ಕಷ್ಟ ಇನ್ನಷ್ಟು ಹೆಚ್ಚುವುದು ಕಾಲರಾ, ಅಮಶಂಕೆ ಮುಂತಾದ ಸಾಂಕ್ರಾಮಿಕ ರೋಗಗಳು ಹಬ್ಬುವ ಅಪಾಯ ಸನ್ನಿಹಿತವಾಗಿದೆ. ವೈದ್ಯಕೀಯ ಹಾಗೂ ಜನಾರೋಗ್ಯ ರಕ್ಷಣಾ ಇಲಾಖೆ ಜಲಮೂಲಗಳಿಂದ ಸೋಂಕು ನಿವಾರಣೆ ಮಾಡಲು ಈಗಲೇ ಕ್ರಮ ಕೈಕೊಳ್ಳಬೇಕು. ಈ ಸೋಂಕು ನಿವಾರಣೆಯನ್ನು ಕಾಲಕಾಲಕ್ಕೆ ನಡೆಸುತ್ತಿರಬೇಕು. ಈ ಸಾಂಕ್ರಾಮಿಕ ರೋಗಗಳು ತಲೆದೋರಿದರೆ ಬೇಕಾಗುವ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಈಗಲೇ ಕೂಡಿಟ್ಟುಕೊಳ್ಳಬೇಕು. ಮುಲ್ಟಿವಿಟಮಿನ್ ಗುಳಿಗೆಗಳನ್ನು ವಿಟಮಿನ್ ಎ—ಗುಳಿಗೆಗಳನ್ನು ತರಿಸಿಕೊಂಡು ಪೀಡಿತ ಪ್ರದೇಶಗಳಲ್ಲಿ ಮಕ್ಕಳಿಗೆ ಹಂಚಲು ಪ್ರಯತ್ನ ನಡೆಸಬೇಕು.

(10) ನೈಸರ್ಗಿಕ ಜಲಮೂಲಗಳಿಂದಲೂ ಹಳ್ಳಗಳಿಂದಲೂ ನೀರೆತ್ತುವುದಕ್ಕಾಗಿ ರೈತರಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಆಯಿಲ್ ಇಂಜಿನ್ ಪಂಪಸೆಟ್ಟುಗಳನ್ನು ಬಾಡಿಗೆ ಮೇಲೆ ಒದಗಿಸಿ ಆಹಾರ ಮತ್ತು ಮೇವಿನ ಬೆಳೆಗಳನ್ನು ಬೆಳೆಸುವುದಕ್ಕಾಗಿ 1965ರಲ್ಲಿ ಮಾಡಿದ ಯೋಜನೆಯಂತಹ ಯೋಜನೆಯನ್ನು ಈ ಸಲವೂ ಕಾರ್ಯರೂಪಕ್ಕೆ ತರಬಹುದಾಗಿದೆ.

(11) ಯಾವ ಬಾವಿಗಳಿಗೆ ಹಿಂದೆ ಸರ್ಕಾರದವರು ಸಾಲ ಕೊಟ್ಟಿದ್ದರೋ ಅಂಥ ಬಾವಿಗಳ ಆಳ ಹೆಚ್ಚಿಸುವುದಕ್ಕೆ ಭೂ ಅಭಿವೃದ್ಧಿ ಬ್ಯಾಂಕ್ ಸಾಲ ಕೊಡುತ್ತಿಲ್ಲ. ಈ ಷರತ್ತನ್ನು ಸಡಿಲಗೊಳಿಸುವಂತೆ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕಿಗೆ ವಿನಂತಿ ಮಾಡಿಕೊಳ್ಳಬಹುದು. ಅಗತ್ಯವಿದ್ದರೆ ಭೂ ಅಭಿವೃದ್ಧಿ ಬ್ಯಾಂಕಿಗೆ ಸಲ್ಲತಕ್ಕ ಹಣಕ್ಕೆ ಅದ್ಯತೆ ಕೊಡಬಹುದು.

ಈ ಆದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸಾಧಿಸಿದ ಪ್ರಗತಿಯನ್ನು ಮಾನ್ಯ ಸದಸ್ಯರು ತಿಳಿಯ ಬಯಸುತ್ತಾರೆಂದು ನಂಬಿದ್ದೇನೆ. 20ನೇ ನವೆಂಬರ್ 1972ನೇ ದಿನಾಂಕದಂದು, ಪೀಡಿತ ಜಿಲ್ಲೆಗಳಲ್ಲಿ 10,136 ನ್ಯಾಯಬೆಲೆಯ ಅಂಗಡಿಗಳಿದ್ದವು. ಇವುಗಳ ಪೈಕಿ 4,296 ಅಂಗಡಿಗಳು ಹಿಂದೆ ಸೂಚಿಸಿದ ಅತ್ಯಂತ ಪೀಡಿತ ಜಿಲ್ಲೆಗಳಿದ್ದವು. ನೀರಾವರಿಯಾದ ಪ್ರದೇಶಗಳಲ್ಲಿ ಸಂಗ್ರಹಿಸಿದ 1,000 ಟನ್ ಮೇವನ್ನು ಬೀದರ್, ಗುಲಬರ್ಗಾ ಜಿಲ್ಲೆಗಳಿಗೆ ಸಾಗಿಸಲಾಗುತ್ತಿದೆ. ಇದರಲ್ಲಿ ಹೆಚ್ಚಿನದನ್ನು ಉಚಿತವಾಗಿ ಹಂಚಲಾಗುತ್ತಿದೆ. ಸ್ವಯಂ ಸೇವಾ ಸಂಸ್ಥೆಗಳು ಸಾಗಣಿ ವ್ಯವಸ್ಥೆಯನ್ನು ಕೂಡಾ ಉಚಿತವಾಗಿ ಒದಗಿಸುತ್ತಿವೆ. ಮೇವನ್ನು ದಾನ ಮಾಡಿದ ಮಹಾಶಯರಿಗೂ ಈ ಮೇವನ್ನು ರವಾನಿಸುವ ಸಂಸ್ಥೆಗಳಿಗೂ ಅವರು ನೀಡಿದ ಉದಾರ ಸಹಾಯಕ್ಕೆ ಹಾರ್ದಿಕ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಬೆಳಗಾವಿ ಮತ್ತು ಕನ್ನಡ ಜಿಲ್ಲೆಗಳ ಅರಣ್ಯ ಪ್ರದೇಶಗಳಿಂದ ವಿಜಾಪುರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಜಿಲ್ಲೆಗೆ 172 ಲಾರಿ ಮೇವು ಬಂದಿದೆ. ಪ್ರತಿದಿನ ಸುಮಾರು 50 ಟನ್ ಮೇವನ್ನು ಒದಗಿಸಲು ಏರ್ಪಾಡು ಮಾಡಲಾಗಿದೆ. ಪೀಡಿತ ಪ್ರದೇಶಗಳಿಗೆ ಒದಗಿಸುವುದಕ್ಕಾಗಿ ನೀರಾವರಿ ಪ್ರದೇಶಗಳಿಂದ ಭತ್ತದ ಒಣ ಹುಲ್ಲನ್ನು ಪಡೆದುಕೊಳ್ಳಲು ವಿಶೇಷಾಧಿಕಾರಿಗಳೊಬ್ಬರನ್ನು ನೇಮಿಸಲಾಗಿದೆ. ಮಧ್ಯಪ್ರದೇಶದಿಂದ 1,000 ಟನ್ ಕಾಡು ಹುಲ್ಲನ್ನು ತರಿಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ.

ಆದರೆ ಪೀಡಿತ ಪ್ರದೇಶಗಳ ಜನತೆ ತಮ್ಮ ಜಾನುವಾರುಗಳನ್ನು ಆರಣ್ಯಗಳಿಗೆ ಸಾಗಿಸಲು ಮನಸ್ಸಿಲ್ಲದವರಾಗಿದ್ದಾರೆ. ಮೇವಿನ ಮಳಿಗೆಗಳನ್ನು ಸ್ಥಾಪಿಸಿ, ಅಲ್ಲಿ ಬೇರೆ ಕಡೆಯಿಂದ ಪಡೆದ ಮೇವನ್ನು ಜಾನುವಾರುಗಳಿಗೆ ಕೊಡಲು ಉದ್ದೇಶಿಸಿದೆ.

4-30 P.M.

ಈ ಕೆಲಸಕ್ಕೆ ಮೇವು ಭಾರಿ ಪ್ರಮಾಣದಲ್ಲಿ ಬೇಕಾಗುವುದು, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಆ ಬಗೆಯ ಬೇರೆ ಸಂಸ್ಥೆಗಳು ಮೇವು ದೊರೆಯುವ ಸ್ಥಳಗಳಿಂದ ಅದನ್ನು ಖರೀದಿ ಮಾಡಿ ಖರೀದಿ ಬೆಲೆಗೆ ಅದನ್ನು ಪೀಡಿತ ಪ್ರದೇಶಗಳಲ್ಲಿ ಮಾರಾಟ ಮಾಡಿ ಉಪಯುಕ್ತ ಸೇವೆ ಸಲ್ಲಿಸಬಲ್ಲವು. ರವಾನೆ ವೆಚ್ಚವನ್ನು ತಾವೇ ವಹಿಸಿಕೊಳ್ಳುವುದಾಗಿ ಸರ್ಕಾರದವರು ಒಪ್ಪಿಕೊಂಡಿದ್ದರೂ ಕೂಡಾ ಮಾರ್ಕೆಟಿಂಗ್ ಈ ಸಂಸ್ಥೆಗಳ ನಿಲುವು ಉತ್ತೇಜಕವಾಗಿಲ್ಲ.

ಬಾವಿ ಕೊರೆಯುವವರಿಗ್ಗುಗಳನ್ನು ಪೀಡಿತ ಪ್ರದೇಶಗಳಿಗೆ ಸಾಗಿಸಲಾಗಿದೆ. ಅತ್ಯಂತ ತೊಂದರೆಗೊಳಗಾದ ಜಿಲ್ಲೆಗಳಲ್ಲಿ ಇರುವರಿಗ್ಗುಗಳ ಸಂಖ್ಯೆ ಈ ಮುಂದಿನಂತಿದೆ :

ಬಿಜಾಪುರ :	4
ಗುಲಬರ್ಗಾ :	6
ಬೀದರ :	5
ಬೆಳಗಾವಿ :	1
ರಾಯಚೂರು :	1

ಭೂಸಾರ ರಕ್ಷಣೆಗೆ ಬೇಕಾಗುವ ಕ್ಷೇತ್ರ ಸಹಾಯಕರನ್ನೆಲ್ಲ ಮುಕರೂರು ಮಾಡಲಾಗಿದೆ. ಅವರು ಇಷ್ಟರಲ್ಲೇ ಕೆಲಸಕ್ಕೆ ಸೇರುವ ನಿರೀಕ್ಷೆಯಿದೆ. ಸಾಲದ ಅರ್ಜಿಗಳ ಪರಿಶೀಲನೆಯನ್ನು ತ್ವರಿತಗೊಳಿಸಲು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಕ್ರಮಕೈಗೊಂಡಿವೆ. ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕು 1972ನೇ ಇಸವಿ ಜುಲೈ 1ನೇ ದಿನಾಂಕದಿಂದ 4,346 ಬಾವಿಗಳಿಗೆ ಸಾಲ ಮಂಜೂರು ಮಾಡಿದೆ. ಇವುಗಳ ಪೈಕಿ 2,606 ಬಾವಿಗಳು ಅತ್ಯಂತ ಸಂಕಷ್ಟಕ್ಕೀಡಾದ ಜಿಲ್ಲೆಗಳಲ್ಲಿವೆ.

ಕಾರಂಜ ಯೋಜನೆ ಕೆಲಸ ಪ್ರಾರಂಭವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಮಲಪ್ರಭಾಯೋಜನೆಗಳ ಕಾಲುವೆ ನಿರ್ಮಾಣ ಕಾರ್ಯಗಳೂ ಪ್ರಾರಂಭವಾಗಲಿವೆ. ಈ ಯೋಜನೆಗಳನ್ನು ತ್ವರಿಗೊಳಿಸುವುದಕ್ಕಾಗಿ ಭಾರತ ಸರ್ಕಾರದಿಂದ ಹಣ ಬಿಡುಗಡೆಯಾಗುವವರೆಗೆ "61 ಕ್ಷಾಮದ ಒಗ್ಗೆ ಗ್ರಾಂಟುಗಳು" ಎಂಬ ಶೀರ್ಷಿಕೆಯಿಂದ 2 ಕೋಟಿ ರೂಪಾಯಿ ಕೊಡಲಾಗಿದೆ. ಈ ಕಾಮಗಾರಿಗಳೂ ಮತ್ತು, 50 ಖತದ ನೀರಾವರಿ ಕಾಮಗಾರಿಗಳೂ ಮತ್ತು 770 ಚಿಕ್ಕಪುಟ್ಟ ನೀರಾವರಿ ಕಾಮಗಾರಿಗಳೂ ಪೀಡಿತ ಜಿಲ್ಲೆಗಳಲ್ಲಿ ನಡೆಯುತ್ತಿವೆ.

ಆಹಾರ ಬೆಳೆ, ಮೇವಿನ ಬೆಳೆ ಪಡೆಯುವುದಕ್ಕಾಗಿ ನದಿಗಳಿಂದಲೂ, ಹಳ್ಳಗಳಿಂದಲೂ ನೀರೆತ್ತುವುದಕ್ಕಾಗಿ ಪೀಡಿತ ಪ್ರದೇಶಗಳ ರೈತರಿಗೆ ಬಾಡಿಗೆ ಮೇಲೆ 500 ಡಿಸೆಲ್ ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಕೊಡುವುದಕ್ಕಾಗಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ 25 ಲಕ್ಷ ರೂ. ಸಾಲ ಕೊಡಲಾಗಿದೆ.

ಪರಿಹಾರ ಕಾಮಗಾರಿಗಳ ಕಾರ್ಯಗತಿಯನ್ನು ಕುಂಠಿತಗೊಳಿಸಿಲ್ಲ. 16 ಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಗಳಿಗೂ, ಇಲಾಖಾ ಕಾಮಗಾರಿಗಳಿಗೂ ನೇಮಕ ಹೊಂದಿದ ಜನರ ಸಂಖ್ಯೆ ಎರಡು ತಿಂಗಳಲ್ಲಿ ಅರ್ಧ ಲಕ್ಷದಷ್ಟು ಹೆಚ್ಚಾಗಿದೆ. ಆಗಸ್ಟ್ ತಿಂಗಳ ಕೊನೆಗೆ 5,17,924 ಜನರನ್ನು ನೇಮಿಸಿಕೊಳ್ಳಲಾಗಿತ್ತು. ಆದರೆ ನವೆಂಬರ್ 20 ರಿಂದ 5.7 ಲಕ್ಷ ಜನ ಕೆಲಸ ಮಾಡುತ್ತಿದ್ದರು.

ಕಷ್ಟಕ್ಕೆ ಗುರಿಯಾಗುವವರಿಗೆ ಆಹಾರ ಕೊಡುವ ಕಾರ್ಯಕ್ರಮ ಉಪಯುಕ್ತವಾಗಿದೆ. ಆಹಾರ ಪಡೆದವರ ಸಂಖ್ಯೆ 3,57,070. ಇದರಲ್ಲಿ ಮಧ್ಯಾಹ್ನದ ಊಟ ಪಡೆಯುವ ಶಾಲಾ ಮಕ್ಕಳ ಸಂಖ್ಯೆ ಸೇರಿಲ್ಲ.

ಅತ್ಯಂತ ಪೀಡಿತ ಪ್ರದೇಶಗಳನ್ನು ಕೂಡ ''ಕ್ಷಾಮ ಪ್ರದೇಶ'' ಎಂದು ಸರ್ಕಾರದವರು ಇನ್ನೂ ಘೋಷಿಸಿಲ್ಲವೆಂದೂ ಅಲ್ಲಿಗೆ ಕ್ಷಾಮ ನಿಯಮಾವಳಿಯ ನಿಬಂಧನೆಗಳನ್ನು ಅನ್ವಯಿಸಿಲ್ಲವೆಂದೂ ಕೆಲವು ಕಡೆ ಟೀಕೆ ಬಂದಿದೆ. ಅಲ್ಲದೆ ಈಗ ಸರ್ಕಾರದವರು ಕೈಕೊಂಡ ಕ್ರಮಗಳು ಹಳೆಯ ಕಾಲದ್ದಾಗಿ ಇಂದಿನ ಅಗತ್ಯಗಳಿಗೆ ಸೂಕ್ತವಲ್ಲದ ಕ್ಷಾಮ ನಿಯಮಾವಳಿಯನ್ನು ಆಧರಿಸಿದೆ ಎಂಬ ಇನ್ನೊಂದು ಟೀಕೆಯೂ ಇದೆ. ಆದರೆ ಈ ಸಮಗ್ರ ಸಮಸ್ಯೆಯ ಬಗೆಗೆ ಸರ್ಕಾರದವರು ಅನುಸರಿಸುವ ಮಾರ್ಗವು ಕೇವಲ ವ್ಯವಹಾರಿಕ ಮಾರ್ಗವೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇನೆ. ಕ್ಷಾಮ ನಿಯಮಾವಳಿಯಲ್ಲಿ ಉಪಯುಕ್ತವಾಗಿರುವುದನ್ನೆಲ್ಲ ಬಳಸಿಕೊಂಡಿದ್ದೇವೆ. ಆದರೆ ಯಾವ ಕ್ರಮವೇ ಆಗಲಿ ಅದು ಕ್ಷಾಮ ನಿಯಮಾವಳಿಯಲ್ಲಿಲ್ಲ ಎಂಬ ಒಂದೇ ಕಾರಣದಿಂದ ಆಂಥ ಕ್ರಮವನ್ನು ನಿಲ್ಲಿಸಿಲ್ಲ. ಯಾವುದೇ ಪ್ರದೇಶವನ್ನು ಕ್ಷಾಮ ಪ್ರದೇಶವೆಂದು ಘೋಷಿಸುವ ಪದ್ಧತಿ ಬೀರಾಯನ ಕಾಲದ ಕಲ್ಪನೆ. ಇಂದಿನ ಸನ್ನಿವೇಶಗಳಲ್ಲಿ ಅದಕ್ಕೆ ಅರ್ಥವಿಲ್ಲ.

ಆಗಸ್ಟ್ 1972 ರ ಅಂತ್ಯದಲ್ಲಿ ಪರಿಹಾರ ಕಾರ್ಯಗಳಿಗೂ, ಇಲಾಖಾ ಕಾಮಗಾರಿಗಳಿಗೂ ನೇಮಕ ಹೊಂದಿದ ಜನರ ಒಟ್ಟು ಸಂಖ್ಯೆಯು ಸುಮಾರು 5.18 ಲಕ್ಷ, ಇವರ ಪೈಕಿ2.83 ಲಕ್ಷ ಜನರು ''64 ಕ್ಷಾಮ'' ಎಂಬ ಶೀರ್ಷಿಕೆಯ ಹಣದಿಂದ ನಡೆಯುವ ಕಾಮಗಾರಿಗಳಲ್ಲೂ 2.35 ಲಕ್ಷ ಜನರು ಇಲಾಖಾ ಕಾಮಗಾರಿಗಳಲ್ಲೂ ಕೆಲಸ ಮಾಡುತ್ತಿದ್ದರು. ಸೆಪ್ಟೆಂಬರ ಮತ್ತು ಅಕ್ಟೋಬರ್ ತಿಂಗಳಲ್ಲಿ ವ್ಯಯಿಸಿದ್ದರೂ ಸಹ ಈ ಅಂಕೆಗಳು 20ನೇ ನವೆಂಬರ್ 1972 ರ ಪೊತ್ತಿಗೆ 5.7ಲಕ್ಷಕ್ಕೆ ಏರಿವೆ. ಅತ್ಯಂತ ಪೀಡಿತವಾದ ಈ 5 ಜಿಲ್ಲೆಗಳಲ್ಲಿ ಹೆಚ್ಚಿನ ಪರಿಹಾರ ಕಾಮಗಾರಿಗಳನ್ನು ಸ್ವಾರಂಭಿಸುವುದು ಅಗತ್ಯವಾಗಬಹುದು. ಇಲಾಖೆಯ ಮೂಲಕ ನಡೆಯುವ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ಒದಗಿಸಿದ ಹಣವೆಲ್ಲ ಮುಗಿದುಹೋದ ಕಾರಣ, ಕೆಲಸ ಬಯಸುವ ಎಲ್ಲ ಜನರಿಗೂ ''64'' ಕ್ಷಾಮ ಎಂಬ ಶೀರ್ಷಿಕೆಯ ಹಣದಿಂದ ನಡೆಯುವ ಕಾಮಗಾರಿಗಳಲ್ಲಿಯೇ ಕೆಲಸ ಒದಗಿಸಬೇಕಾಗುವುದು. ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಡಿಸೆಂಬರ್ ಮಧ್ಯ ಭಾಗದೊಳಗೆ ಕೊಯ್ಲು ಪ್ರಾರಂಭವಾಗಬಹುದು. ಆಗ ಈ ಜಿಲ್ಲೆಗಳಲ್ಲಿ ಕಾಮಗಾರಿಗಳ ಗತಿಯನ್ನು ನಿಧಾನಗೊಳಿಸಲು ಸಾಧ್ಯವಾದರೂ ಸಹ, ಗುಲ್ಬರ್ಗಾ, ಬಿಜಾಪುರ, ಬೀದರ, ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕನಿಷ್ಠ ಪಕ್ಷ 6 ಲಕ್ಷ ಜನರಿಗಾದರೂ ಉದ್ಯೋಗ ಒದಗಿಸಬೇಕಾಗುವುದು. ಇದಕ್ಕೆ ದಿನ ಒಂದಕ್ಕೆ ತಗಲುವ ವೆಚ್ಚ 15 ಲಕ್ಷ ರೂಪಾಯಿ. ತಿಂಗಳಲ್ಲಿ 25 ಕೆಲಸದ ದಿನ ಎಂದು ಲೆಕ್ಕಕೊಂಡರೆ, ತಿಂಗಳಿಗೆ 3.75 ಕೋಟಿ ರೂಪಾಯಿ ಹಣ ಬೇಕಾಗುವುದು. 1ನೇ ನವೆಂಬರ್ 1972 ರಿಂದ 31ನೇ ಮಾರ್ಚ 1973 ರ ವರೆಗಿನ 5 ತಿಂಗಳವರೆಗೆ ರಾಜ್ಯ ಸರ್ಕಾರದವರು ಪರಿಹಾರ ಕಾಮಗಾರಿಗಳಿಗಾಗಿ 18.75 ಕೋಟಿ ರೂಪಾಯಿ ವೆಚ್ಚ ಮಾಡಬೇಕಾಗುವುದು.

ಭಾರಿ ನೀರಾವರಿ ಕಾಮಗಾರಿಗಳ ಕಾಲುವೆಗಳು, ಚಿಕ್ಕಪುಟ್ಟ ನೀರಾವರಿ ಕಾಮಗಾರಿಗಳು, ಸಮಪಾತಳಿ ಒಡ್ಡುಗಳು, ಪಥ ನಿರ್ಮಾಣ, ರಸ್ತೆಗಳು ಮತ್ತು ಮುಂತಾದ ಖಾಯಂ ಆಸ್ತಿಗಳ ನಿರ್ಮಾಣದ ಕಾರ್ಯದಲ್ಲಿ ಅದಷ್ಟು ಮಟ್ಟಿಗೆ ಉದ್ಯೋಗ ಒದಗಿಸಬೇಕೆಂದು ಉದ್ದೇಶಿಸಲಾಗಿದೆ.

ಇವೆಲ್ಲಾ ಕಾಮಗಾರಿಗಳನ್ನೂ ಇಲಾಖಾ ಮೂಲಕವಾಗಿಯೇ ಕೈಕೊಳ್ಳಲಾಗುವುದೇ ಹೊರತು, ಅವುಗಳನ್ನು ಕಂಟ್ರಾಕ್ಟಿಗೆ ಕೊಡಲಾಗುವುದಿಲ್ಲ. ಇದರಿಂದಾಗಿ ಈ ಕಾಮಗಾರಿಗಳನ್ನು ನಿರ್ವಹಿಸುವಾಗ ಸ್ಥಳೀಯ ಜನರಿಗೆ ಉದ್ಯೋಗ ದೊರೆಯುವುದು.

ಮೇಲೆ ಸೂಚಿಸಿದ ಉದ್ಯೋಗ ಕಾರ್ಯಕ್ರಮದ ಜತೆಗೆ ಪೀಡಿತ ಪ್ರದೇಶಗಳಲ್ಲಿ ನೀರಾವರಿ ಬಾವಿ ತೋಡಿಸುವ ಕೆಲಸವನ್ನು ಭಾರಿ ಪ್ರಮಾಣದಲ್ಲಿ ಕೈಕೊಳ್ಳುವುದು ಅಗತ್ಯ.

ಮೇವಿನ ತೀವ್ರ ಅಭಾವವನ್ನು ಆಗಲೇ ಸೂಚಿಸಿದ್ದೇನೆ. ಮೇವಿನ ಖರೀದಿಗಾಗಿ ಭಾರಿ ಪ್ರಮಾಣದಲ್ಲಿ ಸಾಲಗಳನ್ನು ವಿಂಜೂರು ಮಾಡಬೇಕಾಗುವುದು.

ಕುಡಿಯುವ ನೀರಿನ ಸಮಸ್ಯೆ ಕೂಡಾ ತೀವ್ರವಾಗಿದೆ. ಮುಂದಿನ ಬೇಸಿಗೆ ಕಾಲದಲ್ಲಿ ಸಾಕಷ್ಟು ನೀರು ಸರಬರಾಜಾಗಬೇಕಾದರೆ ಹೊಸ ಬಾವಿಗಳನ್ನು ತೋಡಬೇಕಾಗುವುದು.

ಈ ಎಲ್ಲಾ ಕೆಲಸಗಳಿಗೆ ಹತ್ತು ಕೋಟಿ ರೂಪಾಯಿ ಬೇಕಾಗುವುದು.

ಆದ್ದರಿಂದ ಬೇರೆ ಬೇರೆ ಬಾಬುಗಳಿಗೆ ಸಂಬಂಧಪಟ್ಟಂತೆ, ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಮಾರ್ಚ್, 1973ರ ಅಂತ್ಯದ ವರೆಗೆ ಒಟ್ಟು 28.75 ಕೋಟಿ ರೂಪಾಯಿ ಬೇಕಾಗುವುದು.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಈ ಬೇರೆ ಬೇರೆ ಪರಿಹಾರ ಕಾರ್ಯಗಳನ್ನು ಕೈಕೊಳ್ಳುವ ಬಗ್ಗೆಯೂ ಮತ್ತು ಅವುಗಳನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆಯೂ ಇಷ್ಟು ಹಣ ಒದಗಿಸುವಂತೆ ಕೇಂದ್ರ ಸರ್ಕಾರದ ವರಿಗೆ ಪತ್ರ ಬರೆಯಲಾಗಿದೆ.

ಪರಿಶಿಷ್ಟಗಳು ಮತ್ತು ತಖ್ತೆ

ಪರಿಶಿಷ್ಟ 1. ಅಭಾವ ಪರಿಸ್ಥಿತಿಯಿಂದಾಗಿ ಬಾಧಿತವಾದ ಜಿಲ್ಲಾವಾರು ಪ್ರದೇಶಗಳನ್ನು ಮತ್ತು ಜನಸಂಖ್ಯೆಯನ್ನು ತೋರಿಸುವ ಪರಿಶಿಷ್ಟ.

ಪರಿಶಿಷ್ಟ 2. ಜಿಲ್ಲಾವಾರು ಮಳೆತೋರಿಸುವ ಪರಿಶಿಷ್ಟ.

ಪರಿಶಿಷ್ಟ 3. 1972ರ ಖರೀಫ್ ಹಂಗಾಮಿನಲ್ಲಿ ಬಿತ್ತನೆ ಮಾಡಬೇಕಾದ ವಾಡಿಕೆ ಪ್ರದೇಶ ಮತ್ತು ಪ್ರತ್ಯೇಕವಾಗಿ ಬಿತ್ತನೆ ಮಾಡಿದ ಪ್ರದೇಶ—ಜಿಲ್ಲಾವಾರು.

ತಖ್ತೆ. "64 ಕ್ಷಾಮ" ಎಂಬ ಶಿರ್ಷಿಕದ ಕೆಳಗೆ 20ನೇ ನವಂಬರ್, 1972ರ ವರೆಗೆ ಪ್ರತಿ ಜಿಲ್ಲೆಗೆ ಹಂಚಿಕೊಡರಾದ ಪೊಬಲಗನ್ನು ತೋರಿನುವ ತಖ್ತೆ.

ಪರಿಶಿಷ್ಟ 1

ಅಭಾವ ಪರಿಸ್ಥಿತಿಯಿಂದಾಗಿ ಬಾಧಿತವಾದ ಜಿಲ್ಲಾವಾರು ಪ್ರದೇಶಗಳನ್ನು ಮತ್ತು ಜನಸಂಖ್ಯೆಯ ನ್ನು ತೋರಿನುವ ಪರಿಶಿಷ್ಟ

Name of the District	*Total population*	*Total taluks*	*No. of taluks affected*	*Total villages in the district*	*Total villages affected*	*Total population affected*
1	2	3	4	5	6	7
1. Bangalore ..	18,24,031	11	11	2,764	668	2,93,678
2. Kolar ..	14,08,694	11	11	3,365	3,066	12,86,892
3. Tumkur	16,27,721	10	10	2,725	1,892	9,29,289
4. Chitradurga ..	13,97,456	9	8	1,486	933	6,31,051
5. Shimoga ..	13,01,485	9	5	2,011	263	1,87,801
6. Mysore ..	20,77,238	11	11	1,818	1,177	9,14,470
7. Mandya ..	9,93,973	7	7	1,479	1,065	4,39,677
8. Hassan ..	11,00,718	8	6	2,591	1,643	6,45,801
9. Chickmagalur	7,36,647	7	3	1,110	457	2,38,016
10. Belgaum ..	24,23,342	10	8	1,182	385	5,96,167
11. Bijapur ..	19,86,591	11	11	1,256	742	11,47,021
12. Dharwar ..	23,42,213	17	8	1,434	383	7,66,006
13. Gulbarga ..	17,39,671	10	10	1,392	1,371	13,67,474
14. Raichur ..	14,15,740	9	9	1,529	991	8,10,957
15. Bidar ..	8,24,059	5	5	623	547	6,50,033
16. Bellary ..	11,22,472	8	8	628	446	5,14,404
Total ..		153	131	27,393	16,029	1,04,18,737

ಪರಿಶಿಷ್ಟ :—ಜಿಲ್ಲಾವಾರು ಮಂಳೆ ತೋರಿಸುವ ಪರಿಶಿಷ್ಟ

ಬಿಜಾಪುರ ಜಿಲ್ಲೆಯಲ್ಲಿ ಏಪ್ರಿಲ್ 1972ರಿಂದ 15ನೇ ನವಂಬರ್ 1972ರ ವರೆಗೆ ಆದ ಮಳೆಯನ್ನು ತೋರಿಸುವ ಪರಿಶಿಷ್ಟ.

(*In M.M.*)

Sl. No.	*Name of Taluk*	*April*	*May*		*June*		*July*	
			Normal	*Actual*	*Normal*	*Actual*	*Normal*	*Actual*
1	2	3	4	5	6	7	8	9
1.	Bijapur ..	17.2	28.5	13.4	76.7	12.2	60.2	26.2
2.	Bagewadi ..	..	34.3	24.6	79.5	5.1	67.3	23.8
3.	Muddebihal	17.2	38.6	16.9	74.9	48.7	69.6	20.2
4.	Indi ..	..	21.6	23.2	86.1	20.4	76.5	9.5
5.	Sindgi ..	..	25.1	9.2	91.2	44.3	79.0	21.5
6.	Jamkhandi	..	41.7	2.5	70.1	30.3	66.5	12.1
7.	Mudhol	..	42.4	6.5	71.4	70.0	55.9	15.0
8.	Bilgi ..	..	40.1	25.0	72.9	87.3	54.4	16.9
9.	Bagalkot ..	35.0	42.2	29.3	74.2	38.8	66.0	53.0
10.	Hungund ..	..	40.9	..	66.0	126.2	69.1	32.5
11.	Badami ..	..	48.8	..	66.0	34.6	61.5	26.8

(*In M.M*)

Sl. No.	*Name of Taluk*	*August*		*September*		*October*		*November*	
		Normal	*Actual*	*Normal*	*Actual*	*Normal*	*Actual*	*Normal*	*Actual*
		10	11	12	13	14	15	16	17
1.	Bijapur ..	51.0	3.0	141.5	116.0	76.7	49.6	30.7	18.2
2.	Bagewadi ..	77.2	10.1	151.6	163.3	89.7	54.1	32.5	71.0
3.	Muddebihal	84.1	12.1	165.1	68.0	75.7	60.9	28.7	82.0
4.	Indi ..	89.7	18.6	173.2	44.9	73.7	51.0	36.6	71.9
5.	Sindgi ..	89.4	12.2	150.1	90.3	74.2	78.5	29.0	12.0
6.	Jamkhandi	57.1	..	142.5	202.9	90.4	65.0	32.0	30.0
7.	Mudhol ..	50.8	5.0	140.5	101.5	80.3	52.1	45.0	6.0
8.	Bilgi ..	57.7	1.0	137.9	129.2	74.2	45.8	34.0	36.6
9.	Bagalkot ..	60.5	5.0	143.8	146.0	84.1	85.0	33.8	99.1
10.	Hungund ..	76.7	2.0	148.1	89.9	86.6	19.4	38.3	20.3
11.	Badami ..	72.1	4.9	145.5	206.0	91.7	65.9	45.0	13.7

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಬೆಳಗಾವ್ ಜಿಲ್ಲೆಯಲ್ಲಿ ಏಪ್ರಿಲ್ 1972 ರಿಂದ 15ನೇ ನವಂಬರ್ 1972ರ ವರೆಗೆ ಆದ ಮಳೆಯನ್ನು ತೋರಿಸುವ ಪರಿಶಿಷ್ಟ

(*In M.M.*)

Sl. No.	*Name of Taluk*	*April*		*May*		*June*		*July*	
		Normal	*Actual*	*Normal*	*Actual*	*Normal*	*Actual*	*Normal*	*Actual*
1	2	3	4	5	6	7	8	9	10
1.	Athani ..	30.0	36.1	53.1	51.2	77.2	75.2	73.1	29.0
2.	Raibag ..	28.5	11.0	38.6	47.0	50.8	103.0	76.2	25.5
3.	Gokak ..	30.0	19.4	57.1	29.7	68.8	34.4	75.9	36.3
4.	Ramdurg ..	29.0	9.4	51.1	59.1	70.9	40.5	73.7	22.0
5.	Soundatti ..	37.3	21.3	56.6	81.3	65.0	25.5	81.5	42.3
6.	Belgaum ..	43.2	69.3	66.5	112.2	190.7	169.2	459.0	396.7
7.	Khanapur ..	39.2	17.7	117.2	51.3	320.0	464.3	665.0	790.4
8.	Chikodi ..	34.0	..	51.0	119.2	80.8	42.2	127.3	80.4
9.	Hukeri ..	32.8	37.3	66.5	92.0	82.5	41.4	129.8	119.9
10.	Bailhongal	36.8	55.1	62.7	83.7	100.3	93.5	136.4	115.0

(*In M.M.*)

Sl. No.	*Name of Taluk*	*August*		*September*		*October*		*November*	
		Normal	*Actual*	*Normal*	*Actual*	*Normal*	*Actual*	*Normal*	*Actual*
		11	12	13	14	15	16	17	18
1.	Athani ..	75.2	..	137.9	95.0	93.0	39.0	33.3	70.5
2.	Raibag ..	56.6	7.0	101.6	180.5	96.5	16.0	38.6	28.0
3.	Gokak ..	63.0	15.2	95.3	108.1	109.5	6.4	44.2	1.0
4.	Ramdurg ..	70.6	8.0	120.4	100.0	83.1	81.0	48.3	1.0
5.	Soundatti ..	71.4	1.7	122.0	185.9	106.7	45.1	51.1	43.2
6.	Belgaum ..	247.1	111.9	118.9	152.4	111.0	81.0	40.6	26.2
7.	Khanapur ..	345.9	214.3	119.9	182.3	102.9	66.8	37.1	16.0
8.	Chikodi ..	86.4	6.9	94.5	32.5	98.8	23.7	38.9	4.3
9.	Hukeri ..	82.3	23.0	103.9	48.6	109.2	99.7	43.7	43.9
10.	Bailhongal	87.1	46.2	110.7	84.3	114.3	158.9	40.6	22.6

ಧಾರವಾಡ ಜಿಲ್ಲೆಯಲ್ಲಿ ಏಪ್ರಿಲ್ 1972ರಿಂದ 15ನೇ ನವಂಬರ್ 1972ರ ವರೆಗೆ ಆದ ಮಳೆಯನ್ನು ತೋರಿಸುವ ಪರಿಶಿಷ್ಟ

(*In. M.M.*)

Sl. No.	*Name of Taluk*	*April* 1972		*May* 1972		*June* 1972		*July* 1972	
		Normal	*Actual*	*Normal*	*Actual*	*Normal*	*Actual*	*Normal*	*Actual*
1	2	3	4	5	6	7	8	9	10
1.	Dharwar	48.3	27.6	74.4	65.6	95.3	105.03	174.00	134.06
2.	Hubli	36.6	5.0	70.1	160.2	81.8	113.0	113.03	122.8
3.	Kalghatgi	40.1	94.0	72.6	101.00	135.4	160.0	232.07	150.5
4.	Navalgund	28.5	22.0	62.7	66.8	65.0	32.04	67.06	35.2
5.	Gadag	30.7	14.8	69.1	62.7	71.01	141.05	67.06	37.01
6.	Ron	19.6	4.0	52.01	54.1	80.3	60.09	65.00	16.07
7.	Mundargi	19.6	..	51.1	107.08	53.6	31.00	38.01	10.00
8.	Naragund	24.4	14.2	61.5	16.4	49.5	40.07	57.09	40.03
9.	Ranibennur	32.8	6.0	70.4	120.00	68.8	44.00	96.08	81.07
10.	Byadgi	..	..	..	139.09	..	92.00	..	102.07
11.	Hirekerur	34.8	19.00	71.6	144.5	101.09	77.03	199.06	107.08
12.	Haveri	43.2	43.02	79.8	176.8	99.00	104.05	138.07	161.06
13.	Shiggaon	32.3	14.5	62.5	97.9	90.09	100.05	155.07	84.9
14.	Shirhatti	..	23.7	..	98.5	..	133.00	..	31.2
15.	Hangal	38.1	88.1	64.0	117.09	138.09	121.04	268.07	312.8
16.	Kundgol	..	50.8	..	207.02	..	72.02	72.02	104.02
17.	Savanur	34.3	61.5	77.0	94.0	89.1	39.4	123.07	65.0

(ಶ್ರೀ ಎನ್. ಹುಚ್ಚವನಾಸ್ತಿಗೌಡ)

(*In M.M.*)

Sl. No.	*Name of Taluk*	*August* 1972		*September* 1972		*October* 1972		*Nov.* (15*th*) 1972	
		Normal	*Actual*	*Normal*	*Actual*	*Normal*	*Actual*	*Normal*	*Actual*
		11	12	13	14	15	16	17	18
1.	Dharwar	121.04	39.4	102.4	185.8	125.2	25.4	48.0	18.9
2.	Hubli	87.6	35.0	100.8	128.4	111.5	8.4	42.9	30.2
3.	Kalghatgi	153.9	32.6	99.8	160.4	114.8	70.8	43.4	..
4.	Navalgund	71.1	22.0	130.8	198.4	111.8	104.4	36.3	..
